ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 204 RNI Number : KNKAN/25/A2770 04-08-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :204 ರಾಯಚೂರು 04-08-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ಲೋಕಭವನದಲ್ಲಿ ಡಿಕೆಶಿ ವಿಸ್ತರಿತ ಮಂತ್ರಿಮಂಡಲದ ನೂತನ ಸಚಿವರಾಗಿ 19 ಮಂದಿ ಪ್ರಮಾಣವಚನ ಸ್ವೀಕಾರ

ಬೆಂಗಳೂರು: ಲೋಕಭವನದ ಗಾಜಿನ ಮನೆಯಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು 19 ಮಂದಿ ನೂತನ ಸಚಿವರುಗಳಿಗೆ ಗೌಪ್ಯತಾ ಪ್ರಮಾಣವಚನ ಬೋಧಿಸಿದರು.

ಸಿಎಂ ಡಿ.ಕೆ.ಶಿವಕುಮಾರ್ ಸಮ್ಮುಖದಲ್ಲಿ 19 ನೂತನ ಸಚಿವರುಗಳು ಪ್ರಮಾಣವಚನ ಸ್ವೀಕಾರ ಮಾಡಿದರು. ಎಂಎಲ್‌ಸಿ ಗಾಯತ್ರಿ ಶಾಂತೇಗೌಡ ಅವರು ಪ್ರಮಾಣವಚನ ಸ್ವೀಕಾರ ಮಾಡಿಲ್ಲ. ಇವರ ವಿಚಾರವಾಗಿ ಆಕ್ಷೇಪ ವ್ಯಕ್ತವಾದ ಹಿನ್ನೆಲೆ ಸದ್ಯ ಪ್ರಮಾಣವಚನ ಸ್ವೀಕಾರ ಮಾಡಿಲ್ಲ. ಸ್ವತ: ಮಾಜಿ ಸಿಎಂ ಸಿದ್ದರಾಮಯ್ಯ ಅವರು ಗಾಯತ್ರಿ ಶಾಂತೇಗೌಡರಿಗೆ ಪ್ರಮಾಣವಚನ ಸ್ವೀಕರಿಸದಂತೆ ತಾಕೀತು ಮಾಡಿದ್ದಾರೆ ಎಂದು ಚರ್ಚೆಯಾಗುತ್ತಿದೆ. ಹೀಗಾಗಿ ಅವರನ್ನು ಬಿಟ್ಟು ಉಳಿದಂತೆ 19 ಮಂದಿ ಡಿ.ಕೆ. ಶಿವಕುಮಾರ್ ಮಂತ್ರಿಮಂಡಲದ ನೂತನ ಸಚಿವರಾಗಿ ಪ್ರಮಾಣವಚನ ಸ್ವೀಕಾರ ಮಾಡಿದರು.



ಮೊದಲಿಗೆ ಸಚಿವರಾಗಿ ಅಜಯ್ ಧರ್ಮಸಿಂಗ್ ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದರು. ಬಳಿಕ ಹೆಚ್.ಸಿ. ಬಾಲಕೃಷ್ಣ, ಕೆ.ಎಸ್. ಬಸವಂತಪ್ಪ, ಬಸವರಾಜ್ ರಾಯರೆಡ್ಡಿ, ಎನ್. ಚಲುವರಾಯಸ್ವಾಮಿ, ಲಕ್ಷ್ಮಣ್ ಸಂಗಪ್ಪ ಸವದಿ, ಮಧು ಬಂಗಾರಪ್ಪ, ಎಸ್. ಎಸ್. ಮಲ್ಲಿಕಾರ್ಜುನ್, ಬಿ. ನಾಗೇಂದ್ರ ಪ್ರಮಾಣವಚನ ಸ್ವೀಕಾರ ಮಾಡಿದರು.

ಬಳಿಕ ಪಿ.ಎಂ. ನರೇಂದ್ರಸ್ವಾಮಿ ಡಾ. ಅಂಬೇಡ್ಕರ್ ಗಂಗಾಧರ ಅಜ್ಜನ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಸಿ.ಪುಟ್ಟರಂಗ ಶೆಟ್ಟಿ, ಟಿ. ರಘುಮೂರ್ತಿ, ರಿಜ್ವಾನ್ ಅರ್ಷದ್, ರುದ್ರಪ್ಪ ಲಮಾಣಿ, ಸಂತೋಷ್ ಲಾಡ್, ಕೆ.ಎಂ. ಶಿವಲಿಂಗೇಗೌಡ, ಶಿವರಾಜ್ ತಂಗಡಗಿ, ವಿಜಯಾನಂದ ಕಾಶಪ್ಪನವರ್ ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದರು.

ಮೂರನೇಯ ಪುಟಕ್ಕೆ

ಸಚಿವ ರಾಮಲಿಂಗಾರೆಡ್ಡಿ ಅವರು ಭೇಟಿ ನೀಡಿ ಪರಿಶೀಲನೆ

ನಾರಾಯಣಪುರ/ಯಾದಗಿರಿ,ಜ,04

ಕೃಷ್ಣಾ ಅಚ್ಚು ಕಟ್ಟು ಭಾಗದ ರೈತರ ಜೀವನಾಡಿ ಬಸವಸಾಗರ ಜಲಾಶಯಕ್ಕೆ ಮಂಗಳವಾರ ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಂತರ ಸುದ್ದಿಗೋಷ್ಟಿ ಉದ್ದೇಶಿಸಿ ಮಾತನಾಡಿದ ಸಚಿವರು ಆಲಮಟ್ಟಿ ಶಾಸ್ತ್ರೀ ಹಾಗೂ ನಾರಾಯಣಪುರ ಬಸವಸಾಗರ ಅವಳಿ ಜಲಾಶಯಗಳಲ್ಲಿ ಕೃಷಿಗಾಗಿ ಕಾಲುವೆಗಳಿಗೆ ನೀರು ಬಿಡಲು ಕೇವಲ 10 ಟಿಎಂಸಿಯಷ್ಟು ಲಭ್ಯವಿದೆ ಒಂದೊಮ್ಮೆ ಕೃಷ್ಣಾ ಹಾಗೂ ಅದರ ಉಪನದಿಗಳ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗಿ ಅವಳಿ ಜಲಾಶಯಗಳು ಸಂಪೂರ್ಣ ಭರ್ತಿಯಾದರೆ ಮಾತ್ರ ಕೃಷ್ಣಾ ಅಚ್ಚುಕಟ್ಟು ಪ್ರದೇಶದ ರೈತರ ಜಮೀನುಗಳಿಗೆ ಕಾಲುವೆ ನೀರು ಹರಿಸಲು ಯೋಚಿಸಲಾಗುವದು ಎಂದು ಸಚಿವರು ಹೇಳಿದರು.



ಅವಳಿ ಜಲಾಶಯಗಳಲ್ಲಿನ ಡೆಡ್ ಸ್ಟೋರೇಜ್ ಹೊರತುಪಡಿಸಿ 86 ಟಿಎಂಸಿ ನೀರಿನ ಸಂಗ್ರಹ ಇದೆ ಇದರಲ್ಲಿ ಕುಡಿಯಲು, ಆರ್ಟಿಪಿಸಿ ಸೇರಿ ಇತರೆ ಉದ್ಯಮಿಗಳಿಗೆ, ಬ್ರಿಜ್ ಕಮ್ ಬ್ಯಾರೆಜುಗಳಿಗೆ, ಕೆರೆ ತುಂಬವದು, ಬಾಷ್ಪೀಕರಣ, ನದಿ ಪಾತ್ರಕ್ಕೆ ನೀರು ಹರಿಸುವದು ಸೇರಿ ಇತರೆ ಬೇಡಿಕೆ ಅನುಗುಣವಾಗಿ ವಾರ್ಷಿಕವಾಗಿ 76 ಟಿಎಂಸಿ ಯಷ್ಟು ಬಳಕೆ ಮಾಡಿಕೊಳ್ಳಬೇಕಾಗುತ್ತದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಚಿವರು ಸದ್ಯದ ಪರಿಸ್ಥಿತಿಯಲ್ಲಿ

ಮೂರನೇಯ ಪುಟಕ್ಕೆ

ಮಾವಿನಕೆರೆ ಆಸ್ಪತ್ರೆಯಲ್ಲಿ ಎದೆ ಹಾಲಿನ ಮಹತ್ವ ಕಾರ್ಯಕ್ರಮಕ್ಕೆ ಚಾಲನೆ

ರಾಯಚೂರು ಆಗಸ್ಟ್ 03

ಮಗುವಿನಲ್ಲಿ ರೋಗ ನಿರೋಧಕ ಶಕ್ತಿಯನ್ನು ವೃದ್ದಿಗೊಳಿಸಿ ಮಗುವಿಗೆ ಕಾಯಿಲೆಗಳು ಬರದಂತೆ ತಡೆಯುವ ಶಕ್ತಿ ತಾಯಿಯ ಎದೆ ಹಾಲಿನಲ್ಲಿದೆ ಎಂದು ರಾಯಚೂರು ತಾಲೂಕು ಪ್ರಭಾರಿ ಆರೋಗ್ಯಾಧಿಕಾರಿ ಡಾ.ಸತೀಶ್ ಅವರು ಹೇಳಿದರು.



ಆಗಸ್ಟ್ 03ರ ಸೋಮವಾರ ದಂದು ನಗರದ ಮಾವಿನಕೆರಿಯ ಸರ್ಕಾರಿ ಆಸ್ಪತ್ರೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕಾ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ, ಜಹೀರಾಬಾದ್ ಹಾಗೂ ರಾಗಿಮಾನಗಡ್ಡಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ನವೋದಯ ವೈದ್ಯಕೀಯ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನಮ್ಮ ದೇಶದ ಸಾಮಾಜಿಕ ವ್ಯವಸ್ಥೆಯು ಮಗುವಿಗೆ ಬಹು ದಿನಗಳವರೆಗೆ ಹಾಲುಣಿಸುವ ತಾಯ್ತನದ ಬಾಂಧವ್ಯವಿದೆ. ಆದರೆ ಹೆರಿಗೆಯ ತಕ್ಷಣ ರೋಗನಿರೋಧಕ ಶಕ್ತಿ ನೀಡುವ ಹಳದಿ ವರ್ಣದ ಕೊಲೆಸ್ಟ್ರಾಂ ದೊರಕುವುದರಿಂದ ನವಜಾತ ಶಿಶುವಿಗೆ ಹಾಲುಣಿಸುವುದಕ್ಕೆ ತಾಯಿಗೆ ಪಾಲಕರು, ಪೋಷಕರು ಕೈಜೊಡಿಸಬೇಕು ಎಂದರು.

ಮಾವಿನಕರೆ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಅರುಣಾ ಅವರು ಮಾತನಾಡಿ, ಗರ್ಭಿಣಿಯೆಂದು ತಿಳಿದ ದಿನದಿಂದಲೇ ತಾಯಿ ನಿಯಮಿತ ತಪಾಸಣೆ, ಪೌಷ್ಟಿಕ ಆಹಾರ ಸೇವನೆ, ರಕ್ತಹೀನತೆಯಾಗದಂತೆ ಕಾಯಿಪಲ್ಯ ಸೇವನೆ ಮಾಡುವುದರಿಂದ ಹೆರಿಗೆ ಸಮಯದಲ್ಲಿ ಕನಿಷ್ಠ 2.5ಕೆಜಿ ತೂಕದೊಂದಿಗೆ ಮಗುವಿನ ಜನನಕ್ಕೆ ಸಹಾಯಕವಾಗುವುದು. ಅಲ್ಲದೆ ಮಗುವಿನ ವಯಸ್ಸು ಆರು ತಿಂಗಳು ತುಂಬುವವರೆಗೂ ಕೇವಲ ಎದೆಹಾಲನ್ನು ಮಾತ್ರ ನೀಡಬೇಕಿದೆ. ಇದರಿಂದ ತಾಯಿ ಮತ್ತು ಮಗುವಿನ ಬಾಂಧವ್ಯ ವೃದ್ದಿಸುವ, ರಕ್ತಸ್ರಾವ ತಡೆಯುವ, ಗರ್ಭಿಣಿ ಅವಧಿಯ ಬೊಜ್ಜು ಕರುಗಿಸುವ, ಮಹಿಳೆಗೆ ಬರಬಹುದಾದ ಸ್ತನ ಕ್ಯಾನ್ಸರ್ ದೂರಮಾಡುತ್ತದೆ ಎಂದರು.

ಮೂರನೇಯ ಪುಟಕ್ಕೆ

ಶಾಸಕರು, 4 ಎಂಎಲ್‌ಸಿ ಇರುವ ರಾಯಚೂರು ಜಿಲ್ಲೆಗೆ ಒಲಿಯದ ಸಚಿವ ಸ್ಥಾನ : ಕಾರ್ಯಕರ್ತರಿಂದ ಅಸಮಾಧಾನ

ರಾಯಚೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ರಾಜ್ಯ ಸಚಿವ ಸಂಪುಟ ವಿಸ್ತರಣೆಯಲ್ಲಿ ರಾಯಚೂರು ಜಿಲ್ಲೆಗೆ ಸಚಿವ ಸ್ಥಾನ ದೊರೆಯದ ಹಿನ್ನೆಲೆಯಲ್ಲಿ ಜಿಲ್ಲೆಯ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರಲ್ಲಿ ತೀವ್ರ ಅಸಮಾಧಾನ ವ್ಯಕ್ತವಾಗಿದೆ. ಜಾತಿ ಸಮೀಕರಣ, ಪ್ರಾದೇಶಿಕ ಸಮಾನತೆ ಹಾಗೂ ಸಾಮಾಜಿಕ ನ್ಯಾಯದ ಅಂಶಗಳನ್ನು ಕಡೆಗಣಿಸಿ ಜಿಲ್ಲೆಗೆ ಅನ್ಯಾಯ ಮಾಡಲಾಗಿದೆ ಎಂಬ ಆರೋಪಗಳು ಕೇಳಿಬಂದಿವೆ.



ಸಿದ್ದರಾಮಯ್ಯ ನೇತೃತ್ವದ ಹಿಂದಿನ ಸಂಪುಟದಲ್ಲಿ ವಿಧಾನ ಪರಿಷತ್ ಸದಸ್ಯ ಎನ್.ಎಸ್.ಬೋಸರಾಜು ಅವರಿಗೆ ಸಚಿವ ಸ್ಥಾನ ನೀಡಲಾಗಿತ್ತು. ಹೊಸ ಸಂಪುಟದ ಮೊದಲ ಪಟ್ಟಿಯಲ್ಲಿ ಜಿಲ್ಲೆಗೆ ಅವಕಾಶ ದೊರೆಯದಿದ್ದರೂ, ಎರಡನೇ ಹಂತದಲ್ಲಿ ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ ಅಥವಾ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಆಪ್ತರೆಂದು ಗುರುತಿಸಲ್ಪಡುವ ವಿಧಾನ ಪರಿಷತ್ ಸದಸ್ಯ ಎ.ವಸಂತಕುಮಾರ್ ಅವರಿಗೆ ಅವಕಾಶ ಸಿಗಬಹುದು ಎಂಬ ನಿರೀಕ್ಷೆ ಇತ್ತು. ಆದರೆ ಅಂತಿಮವಾಗಿ ಜಿಲ್ಲೆಯ ಯಾರೊಬ್ಬರಿಗೂ ಸಚಿವ ಸ್ಥಾನ ದೊರೆಯದಿರುವುದು ನಿರಾಸೆಗೆ ಕಾರಣವಾಗಿದೆ.

ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳ ಪೈಕಿ ರಾಯಚೂರು ಗ್ರಾಮೀಣ, ಮಾನ್ವಿ, ಸಿಂಧನೂರು ಹಾಗೂ ಮಸ್ಕಿ ಕ್ಷೇತ್ರಗಳಿಂದ ನಾಲ್ವರು ಕಾಂಗ್ರೆಸ್ ಶಾಸಕರು ಆಯ್ಕೆಯಾಗಿದ್ದಾರೆ. ಜೊತೆಗೆ ನಾಲ್ವರು ವಿಧಾನ ಪರಿಷತ್ ಸದಸ್ಯರಿದ್ದರೂ ಜಿಲ್ಲೆಯ ಯಾವುದೇ ಚುನಾಯಿತ ಪ್ರತಿನಿಧಿಗೆ ಸಚಿವ ಸ್ಥಾನ ನೀಡದಿರುವುದು ಅಸಮಾಧಾನಕ್ಕೆ ಕಾರಣವಾಗಿದೆ.

ಎನ್.ಎಸ್. ಬೋಸರಾಜು ಅವರಿಗೆ ಮತ್ತೊಮ್ಮೆ ಅವಕಾಶ ನೀಡದಿದ್ದರೆ, ಹಿರಿಯ ಶಾಸಕ ಹಂಪನಗೌಡ ಬಾದರ್ಲಿ, ಶಾಸಕ ಹಂಪಯ್ಯ ನಾಯಕ ಸಾಹುಕಾರ್, ಬಸನಗೌಡ ದದ್ದಲ್, ಬಸನಗೌಡ ತುರ್ವಿಹಾಳ ಅಥವಾ ವಿಧಾನ ಪರಿಷತ್ ಸದಸ್ಯ ಎ. ವಸಂತಕುಮಾರ್ ಅವರಂತಹ

ಮೂರನೇಯ ಪುಟಕ್ಕೆ

556 ನೇ ಉರ್ಸ್ ಮುಬಾರಕ್ ಹಜರತ್ ಸೈಯದ್ ಶಾಮ್ಸ್ ಆಲಂ ಹುಸೇನಿ ದರ್ಗಾ ಕುತ್ಬೆ ರಾಯಚೂರು

ರಾಯಚೂರು,ಆ.03-

ಕುತುಬ್-ಎ-ರಾಯಚೂರು ಎಂದು ಪ್ರಸಿದ್ಧವಾಗಿರುವ ಹಜರತ್ ಸೈಯದ್ ಶಾ ಶವ್ಸ್ ಅಲಂ ಹುಸೇನಿ (ಆರ್.ಎ.) ಅವರ 556 ನೇ ಉರ್ಸ್-ಎ-ಶರೀಫ್ ಹಬ್ಬವನ್ನು ಜುಲೈ 29 ರಿಂದ ಜುಲೈ 31, 2026 ರವರೆಗೆ ಕರ್ನಾಟಕದ ರಾಯಚೂರಿನಲ್ಲಿರುವ ಶಮ್ಸ್ ಇ ಅಲಂ ದರ್ಗಾ ಷರೀಫ್‌ನಲ್ಲಿ ಆಚರಿಸಲಾಗುತ್ತಿದೆ. ವಾರ್ಷಿಕ ಕಾರ್ಯಕ್ರಮವು ವಿಶೇಷ ಸ್ಯಾಂಡಲ್ ಸಮಾರಂಭಗಳು ಮತ್ತು ಸಾಂಪ್ರದಾಯಿಕ ಆಚರಣೆಗಳೊಂದಿಗೆ ಪ್ರಾರಂಭವಾಯಿತು.



ಉರ್ಸ್ ಇ ಹಜರತ್ ಸೈಯದ್ ಶಾ ಶವ್ಸ್ ಅಲಂ ಹುಸೇನಿ (ಆರ್.ಎ.) ಅವರ ಕುತುಬ್ ಇ ರಾಯಚೂರಿನ ಆಚರಣೆಯು ಜುಲೈ 29 ರಂದು ಸ್ಯಾಂಡಲ್, ಜುಲೈ 30 ರಂದು ಚಿರಗನ್ ಮತ್ತು ಜುಲೈ 31, 2026 ರಂದು ಜಿಯಾರತ್ ನಡೆಯಿತು. ಉರ್ಸ್ ಉತ್ಸವವು ಹಿಂದಿನ ಪದ್ಧತಿಯ ಪ್ರಕಾರ ಮಿಲಾದ್-ಉನ್ ನಬಿ ಹಬ್ಬದವರೆಗೆ ನಡೆಯಲಿದೆ.

ರಾಯಚೂರಿನ ಅಂದ್ರೂನ್ ಕ್ವಿಲ್ಲಾದಲ್ಲಿರುವ ಸಜ್ಜದಾ ಸಾಹೇಬ್ ಮನೆಯಿಂದ ಪ್ರಾರಂಭವಾದ ಮೆರವಣಿಗೆಯಲ್ಲಿ ಮೊಹಮ್ಮದ್ ಶಹಲಂ, ಪರಾಜಿತ ಶಾಸಕ, ಕಾಂಗ್ರೆಸ್ ಮುನ್ಸಿಪಲ್ ಕೌನ್ಸಿಲರ್ ಹಮ್ರಾಜ್, ಕೋರ್ಟ್ ಕ್ಯಾಂಟೀನ್ ಫಾರೂಕ್ ಉಸ್ಮಾನ್, ಫಾರೂಕ್ ಅನ್ವರ್ ಕಂಪನಿ ಮಾಲೀಕರಾದ ಜನಾಬ್ ಅನ್ವರ್ ಸಾಬ್, ಮಾಜಿ ವಕ್ಫ್ ಸಮಿತಿ ಅಧ್ಯಕ್ಷ ಮೊಹಮ್ಮದ್ ರಸೂಲ್, ಹೈದರಾಬಾದ್‌ನ ಜಾವಿದ್ ನ್ಯಾಯಾಧೀಶ ಸಾಬ್, ಇತರ ನಾಯಕರು ಮತ್ತು ಹಿಂದೂ-ಮುಸ್ಲಿಂ ಭಕ್ತರು ಉಪಸ್ಥಿತರಿದ್ದರು. ಮೆರವಣಿಗೆಯು ರಾಯಚೂರಿನ ವಿವಿಧ ಬೀದಿಗಳು ಮತ್ತು ರಸ್ತೆಗಳ ಮೂಲಕ ಹಾದು ರಾಯಚೂರಿನ ಹಜರತ್ ಸೈಯದ್ ಶಾ ಶವ್ಸ್ ಅಲಂ ಹುಸೇನಿ () ಅವರ ಕುತುಬ್ ಇ ರಾಯಚೂರಿನ ಆಚರಣೆಯನ್ನು ತಲುಪಿತು.

ಈ ವರ್ಷದ ಉರುಸ್ ಬಹಳ ವಿಶೇಷವಾಗಿದೆ ಏಕೆಂದರೆ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಹಜರತ್ ಸೈಯದ್ ಶಾ ಮುಬಸ್ಸಿರ್

ಮೂರನೇಯ ಪುಟಕ್ಕೆ

ಪೌರಕಾರ್ಮಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ; ಸುರಕ್ಷತಾ ಕವಚ ಬಳಕೆಗೆ ಪೌರಾಯುಕ್ತರ ಸಲಹೆ

ಯಾದಗಿರಿಜ : ನಗರದ ಸೌಂದರ್ಯೀಕರಣಕ್ಕಾಗಿ ಬೆಳಿಗ್ಗೆ ಎದ್ದು ಚರಂಡಿ ಸ್ವಚ್ಚತೆ ಹಾಗೂ ಕಸ ವಿಲೇವಾರಿಯಲ್ಲಿ ತೊಡಗಿಸಿಕೊಳ್ಳುವ ಪೌರಕಾರ್ಮಿಕರು, ತಮ್ಮ ಸ್ವಂತ ಆರೋಗ್ಯದ ಕಡೆಗೂ ಹೆಚ್ಚಿನ ಗಮನ ಹರಿಸುವುದು ಅತ್ಯಗತ್ಯ ಎಂದು ನಗರಸಭೆ ಪೌರಾಯುಕ್ತ ಉಮೇಶ ಚವ್ಹಾಣ್ ಹೇಳಿದರು.



ನಗರಸಭೆ ಆವರಣದಲ್ಲಿ ಗುರುವಾರ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ಪೌರಕಾರ್ಮಿಕರ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಸ್ವಚ್ಚತಾ ಕಾರ್ಯ ಕೈಗೊಳ್ಳುವಾಗ ಆರೋಗ್ಯದ ದೃಷ್ಟಿಯಿಂದ ಪೌರಕಾರ್ಮಿಕರು ಕಡ್ಡಾಯವಾಗಿ ಸಮವಸ್ತ್ರ ಹಾಗೂ ಸುರಕ್ಷಾ ಕವಚಗಳನ್ನು ಧರಿಸಬೇಕು ಎಂದರು.

ನಗರದ ಸ್ವಚ್ಚತೆಯನ್ನು ಕಾಪಾಡುವ ಜೊತೆಗೆ ಪೌರಕಾರ್ಮಿಕರು ತಮ್ಮ ವೈಯಕ್ತಿಕ ನೈರ್ಮಲ್ಯ ಮತ್ತು ಸ್ವಚ್ಚತೆಗೂ ಪ್ರಾಮುಖ್ಯತೆ ನೀಡಬೇಕು. ಎಲ್ಲಕ್ಕೂ ಹೆಚ್ಚಾಗಿ ಕೆಲಸ ಮಾಡುವಾಗ ಆರೋಗ್ಯ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ನಿಮ್ಮ ಆರೋಗ್ಯ ಕಾಳಜಿಗಾಗಿಯೇ ನಗರಸಭೆ ಇಂದು ಆರೋಗ್ಯ ಶಿಬಿರ ಹಮ್ಮಿಕೊಂಡಿದೆ.

ಮೂರನೇಯ ಪುಟಕ್ಕೆ

ಬರಗಾಲ ಘೋಷಿಸಿ, ರೈತರ ಸಾಲಮನ್ನಾ ಮಾಡಿ-ನರಸಿಂಹ ನಾಯಕ

ರಾಯಚೂರು,ಆ.03-

ಜಿಲ್ಲೆಯಲ್ಲಿ ಮಳೆ ಕೊರತೆಯಿಂದ ಮುಂಗಾರು ಹಂಗಾಮಿನ ಬೆಳೆಗಳು ಸಂಪೂರ್ಣ ಹಾನಿಗೊಳಗಾಗಿ ರೈತರು ಸಂಕಷ್ಟಕ್ಕೆ ಸಿಲುಕಿರುವ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲೆಯನ್ನು ತಕ್ಷಣವೇ ಬರಪೀಡಿತ ಜಿಲ್ಲೆ ಎಂದು ಘೋಷಿಸಿ ರೈತರ ಸಾಲಮನ್ನಾ ಸೇರಿದಂತೆ ಸಮಗ್ರ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಒತ್ತಾಯಿಸಿದೆ.



ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಜಿಲ್ಲಾಧ್ಯಕ್ಷ ನರಸಿಂಹ ನಾಯಕ (ಕಮಲಾಪೂರು), ನವಣೆ, ರಾಗಿ, ಹೆಸರು, ಅಲಸಂದೆ, ಉದ್ದು, ಎಳ್ಳು ಸೇರಿದಂತೆ ಸಿರಿಧಾನ್ಯ ಬೆಳೆಗಳು ಮಳೆ ಕೊರತೆಯಿಂದ ಒಣಗಿ ರೈತರು ಹಾಕಿದ ಬಂಡವಾಳವೇ ನಷ್ಟವಾಗಿದೆ ಎಂದು ಹೇಳಿದರು.


ರೈತರಿಗೆ ಡಿಎಪಿ, ಕಾಂಪ್ಲೆಕ್ಸ್ ಸೇರಿದಂತೆ ಅಗತ್ಯ ರಸಗೊಬ್ಬರವನ್ನು ಸಹಕಾರ ಸಂಘಗಳ ಮೂಲಕ ತಕ್ಷಣ ಪೂರೈಸಬೇಕು. ಪ್ರತಿ ಗ್ರಾಮ ಪಂಚಾಯಿತಿಗೆ ಕೃಷಿ ಸಹಾಯಕರನ್ನು ನೇಮಿಸಿ ರೈತರಿಗೆ ತಾಂತ್ರಿಕ ಮಾರ್ಗದರ್ಶನ ನೀಡಬೇಕು. ಕೃಷಿ ಇಲಾಖೆಯ ನೇಮಕಾತಿಯಲ್ಲಿ ಸರ್ಕಾರಿ ಕೃಷಿ ವಿಶ್ವವಿದ್ಯಾಲಯಗಳ ಪದವೀಧರರಿಗೆ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು.

ರೈತರ ಕೃಷಿ ಸಾಲಗಳನ್ನು ಸಂಪೂರ್ಣ ಮನ್ನಾ ಮಾಡಬೇಕು, ಪ್ರತಿ ಎಕರೆಗೆ ₹25 ಸಾವಿರ ಪರಿಹಾರ ಘೋಷಿಸಬೇಕು, ಉದ್ಯೋಗ ಖಾತ್ರಿ ಯೋಜನೆಯಡಿ ತಕ್ಷಣ ಕೆಲಸ ಆರಂಭಿಸಬೇಕು, ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರ ಧಾನ್ಯಗಳನ್ನು ದ್ವಿಗುಣಗೊಳಿಸಬೇಕು, ಹಿಂಗಾರು ಹಂಗಾಮಿಗೆ ಉಚಿತ ಬಿತ್ತನೆ ಬೀಜ ವಿತರಿಸಬೇಕು ಹಾಗೂ ಹೈನುಗಾರಿಕೆ ಮತ್ತು ಗುಡಿ ಕೈಗಾರಿಕೆಗೆ ಹೆಚ್ಚಿನ ಸಾಲ ಮತ್ತು ಸಹಾಯಧನ ನೀಡಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ಇದೇ ವೇಳೆ ತುಂಗಭದ್ರಾ ಎಡದಂಡೆ ಕಾಲುವೆಯ ಡಿಸ್ಟ್ರಿಬ್ಯೂಟರಿ 102 ಹಾಗೂ 102/ಎ ವ್ಯಾಪ್ತಿಯ 4,310 ಹೆಕ್ಟೇರ್ ಪ್ರದೇಶ ನೀರಾವರಿಯಿಂದ ವಂಚಿತವಾಗದಂತೆ ಶ್ರೀ ವೀರಭದ್ರೇಶ್ವರ ಏತ ನೀರಾವರಿ ಯೋಜನೆಯನ್ನು ಪರಿಷ್ಕರಿಸಿ ಎಲ್ಲಾ 12,630 ಹೆಕ್ಟೇರ್ ಜಮೀನಿಗೂ ನೀರು ಒದಗಿಸಬೇಕು.

ಮೂರನೇಯ ಪುಟಕ್ಕೆ

ಮೇಘನಾಥ ನಾಯಕ ಕೊಲೆ ಪ್ರಕರಣ ಸಿಐಡಿಗೆ ವಹಿಸಿ: ಕರ್ನಾಟಕ ರಕ್ಷಣಾ ವೇದಿಕೆ ಆಗ್ರಹ



ರಾಯಚೂರು,ಆ.03-

ಹಂಚಿನಾಳ ಗ್ರಾಮದ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಮೇಘನಾಥ ನಾಯಕ ಕೊಲೆ ಪ್ರಕರಣವನ್ನು ಸಿಐಡಿಗೆ ವಹಿಸಿ ನೈಜ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಅಧ್ಯಕ್ಷ ವಿನೋದ್ ರೆಡ್ಡಿ. ಎಂ ಆಗ್ರಹಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸೋಮ ವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಕರಣದ ಪ್ರಮುಖ ಆರೋಪಿ ಎಂದು ಆರೋಪಿಸಲಾಗಿರುವ ಕೃಷ್ಣಾಜಿ ಹಾಗೂ ಅವರ ಸಹೋದರರ ವಿರುದ್ಧ ಪ್ರಕರಣ ದಾಖಲಿಸಿ ಗಡಿಪಾರು ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಪೆಟ್ರೋಲ್ ಬಂಕ್‌ನಲ್ಲಿ ನಡೆದ ಹಲ್ಲೆಯಿಂದ ಮೇಘನಾಥ ನಾಯಕ ಮೃತಪಟ್ಟಿರುವುದು ಜಿಲ್ಲೆಯ ಜನರಲ್ಲಿ ಆತಂಕ ಮೂಡಿಸಿದ್ದು, ಪ್ರಕರಣವನ್ನು ಕೇವಲ ಹಣದ ವ್ಯವಹಾರದ ಜಗಳವೆಂದು ಪರಿಗಣಿಸದೆ, ಅದರ ಹಿಂದಿರುವ ಎಲ್ಲ ಆಯಾಮಗಳ ಕುರಿತು ಸಮಗ್ರ ತನಿಖೆ ನಡೆಸಿ ಸತ್ಯಾಂಶವನ್ನು ಬಹಿರಂಗ ಪಡಿಸಬೇಕು ಎಂದು ಹೇಳಿದರು.

ಮೇಘನಾಥ ನಾಯಕ ಅವರು ಸಾಮಾಜಿಕ ಹೋರಾಟಗಾರರಾಗಿದ್ದು, ಗ್ರಾಮ ಪಂಚಾಯಿತಿ ಸದಸ್ಯ ಹಾಗೂ ಅಧ್ಯಕ್ಷರಾಗಿ ಜನಸೇವೆ ಸಲ್ಲಿಸಿದ್ದರು. ಮುಂಬರುವ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸುವ ಉದ್ದೇಶ ಹೊಂದಿದ್ದ ಅವರು, ಹಲವು ಸಾರ್ವಜನಿಕ ವಿಚಾರಗಳಲ್ಲಿ ನ್ಯಾಯಾಲಯದ ಮೂಲಕ ಹೋರಾಟ ನಡೆಸುತ್ತಿದ್ದರು. ಇಂತಹ ಸಂದರ್ಭದಲ್ಲಿ ಅವರ ಹತ್ಯೆ ನಡೆದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ತಿಳಿಸಿದರು.

ಘಟನೆ ನಡೆದ ಪೆಟ್ರೋಲ್ ಬಂಕಿನ ಸಿಸಿಟಿವಿ ದೃಶ್ಯಾವಳಿಗಳನ್ನು ಅಳಿಸಿರುವ ಆರೋಪಗಳು ಕೇಳಿಬಂದಿದ್ದು, ಸಾಕ್ಷ್ಯ ನಾಶಪಡಿಸುವ ಪ್ರಯತ್ನ ನಡೆದಿದೆಯೇ ಎಂಬುದನ್ನು

ಮೂರನೇಯ ಪುಟಕ್ಕೆ

ಪೊಲೀಸ್ ಠಾಣೆಯಲ್ಲಿ ಯುವಕನ ಅನುಮಾನಾಸ್ಪದ ಸಾವು; ಕುಟುಂಬದಿಂದ 'ಲಾಕಪ್ ಡೆತ್' ಆರೋಪ



ವಿಜಯನಗರ ,ಆ.03-

ಕುಟುಂಬ ಕಲಹದ ಹಿನ್ನೆಲೆಯಲ್ಲಿ 112 ತುರ್ತು ಸಹಾಯವಾಣಿ ಸಿಬ್ಬಂದಿಯಿಂದ ಪೊಲೀಸ್ ಠಾಣೆಗೆ ಕರೆತರಲಾಗಿದ್ದ 36 ವರ್ಷದ ಯುವಕನೊಬ್ಬ ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ವಿಜಯನಗರ ಜಿಲ್ಲೆಯಲ್ಲಿ ನಡೆದಿದೆ.

ಮೃತನ ಕುಟುಂಬಸ್ಥರು ಇದು ಸಹಜ ಸಾವು ಅಲ್ಲ, ಪೊಲೀಸ್ ಕಿರುಕುಳದಿಂದ ಸಂಭವಿಸಿದ ಲಾಕಪ್ ಡೆತ್ ಎಂದು ಆರೋಪಿಸಿದ್ದು, ಈ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸುವಂತೆ ಆಗ್ರಹಿಸಿದ್ದಾರೆ.

ಮೃತರನ್ನು ಜಾಲಿನಗರ ನಿವಾಸಿ ಖಲೀಲ್ (36) ಎಂದು ಗುರುತಿಸಲಾಗಿದೆ. ಕುಟುಂಬ ಕಲಹದ ಹಿನ್ನೆಲೆಯಲ್ಲಿ ಅವರ ಪತ್ನಿ 112 ತುರ್ತು ಸಹಾಯವಾಣಿಗೆ ಕರೆ ಮಾಡಿ ದೂರು ನೀಡಿದ್ದು, ಬಳಿಕ ಸ್ಥಳಕ್ಕೆ ತೆರಳಿದ ಸಿಬ್ಬಂದಿ ಖಲೀಲ್ ಅವರನ್ನು ಠಾಣೆಗೆ ಕರೆತಂದಿದ್ದರು ಎಂದು ತಿಳಿದುಬಂದಿದೆ.

ಠಾಣೆಗೆ ಕರೆತಂದ ಬಳಿಕ ಏನಾಯಿತು, ಖಲೀಲ್ ಅವರ ಆರೋಗ್ಯ ಯಾವ ಕಾರಣಕ್ಕೆ ಹದಗೆಟ್ಟಿತು ಹಾಗೂ ಅವರು ಯಾವ ಸಂದರ್ಭಗಳಲ್ಲಿ ಮೃತಪಟ್ಟರು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಠಾಣೆಯಲ್ಲಿಯೇ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಲಾಗಿದೆ ಎಂದು ಕುಟುಂಬಸ್ಥರು ಆರೋಪಿಸಿದ್ದು, ಈ ಕುರಿತು ಪೊಲೀಸ್ ಇಲಾಖೆಯಿಂದ ಅಧಿಕೃತ ಸ್ಪಷ್ಟನೆ ಇನ್ನೂ ಲಭ್ಯವಾಗಿಲ್ಲ.

ಖಲೀಲ್ ಅಸ್ವಸ್ಥಗೊಂಡ ನಂತರ ಮುಂಜಾನೆ ಸುಮಾರು 3 ಗಂಟೆ ವೇಳೆಗೆ ಆಟೋದಲ್ಲಿ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ಯಲಾಗಿದ್ದು, ಅಷ್ಟರಲ್ಲೇ ಅವರು ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಾನ್ಹವಿ, ಡಿವೈಎಸ್ಪಿ ಮಲ್ಲೇಶ ದೊಡ್ಡಮನಿ, ಸಿಪಿಐ ವಿಕಾಸ್ ಲಮಾಣಿ ಸೇರಿದಂತೆ ಹಿರಿಯ ಅಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ ಎಂದು ತಿಳಿದು ಬಂದಿದೆ. ಘಟನೆ ವೇಳೆ ಠಾಣೆಯಲ್ಲಿ ಕರ್ತವ್ಯದಲ್ಲಿದ್ದ ಸಿಬ್ಬಂದಿಯನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಆಸ್ಪತ್ರೆ ಆವರಣದಲ್ಲಿ ಮೃತನ ಸಂಬಂಧಿಕರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರಿಂದ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ ಎಂದು ತಿಳಿದುಬಂದಿದೆ.

ಕಸ್ಟೋಡಿಯಲ್ ಡೆತ್ ಪ್ರಕರಣವಾಗಿರುವ ಹಿನ್ನೆಲೆಯಲ್ಲಿ ತಾಲೂಕು ನ್ಯಾಯಾಧೀಶ ಮಧುಸೂದನ ಅವರ ಸಮುಮ್ಮಖದಲ್ಲಿ ತನಿಖಾ ಪ್ರಕ್ರಿಯೆ ಆರಂಭಿಸಲಾಯಿತು. ತಹಶೀಲ್ದಾರ್ ಕವಿತಾ ಉಪಸ್ಥಿತಿಯಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಪಂಚನಾಮೆ ನಡೆಸಿ, ಹೆಚ್ಚಿನ ವೈದ್ಯಕೀಯ ಪರೀಕ್ಷೆಗಾಗಿ ಮೃತದೇಹವನ್ನು ಕೊಪ್ಪಳ ಕಿಮ್ಸ್ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ.

ಸಿಬಿಐ ತನಿಖೆಗೆ ಶಾಸಕ ನೇಮಿರಾಜ್ ನಾಯ್ಕ್ ಆಗ್ರಹ :

ಘಟನಾ ಸ್ಥಳಕ್ಕೆ ಹಗರಿಬೊಮ್ಮನಹಳ್ಳಿ ಕ್ಷೇತ್ರದ ಜೆಡಿಎಸ್ ಶಾಸಕ ನೇಮಿರಾಜ್ ನಾಯ್ಕ್ ಪೊಲೀಸ್ ಠಾಣೆಗೆ ಭೇಟಿ ನೀಡಿ ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ ಅವರಿಂದ ಪ್ರಕರಣದ ಮಾಹಿತಿ ಪಡೆದರು. ನಂತರ ಪ್ರಕರಣದ ಕುರಿತು ಪ್ರತಿಕ್ರಿಯಿಸಿದ ಶಾಸಕ ನೇಮಿರಾಜ್ ನಾಯ್ಕ್, ಕೇವಲ ಇಬ್ಬರು ಕೆಳಹಂತದ ಸಿಬ್ಬಂದಿಯ ವಿರುದ್ಧ ಪ್ರಕರಣ ದಾಖಲಿಸುವುದರಿಂದ ನ್ಯಾಯ ಸಿಗುವುದಿಲ್ಲ. ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಅಥವಾ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ಸ್ವತಂತ್ರ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಕೂಡ್ಲಿಗಿ ಡಿವೈಎಸ್ಪಿ ಹಾಗೂ ಹಗರಿಬೊಮ್ಮನಹಳ್ಳಿ ಸಿಪಿಐ ಅವರ ಪಾತ್ರವನ್ನೂ ತನಿಖೆಗೆ ಒಳಪಡಿಸಿ, ಅವರ ಹೆಸರನ್ನೂ ಎಫ್‌ಐಆರ್‌ನಲ್ಲಿ ಸೇರಿಸಬೇಕು ಎಂದು ಒತ್ತಾಯಿಸಿದರು.

ಸ್ವತಂತ್ರ ತನಿಖೆ ನಡೆಸಿ, ಕುಟುಂಬಕ್ಕೆ 1 ಕೋಟಿ ರೂ. ಪರಿಹಾರ ನೀಡಿ :

ಹಗರಿಬೊಮ್ಮನಹಳ್ಳಿ ಪೊಲೀಸ್ ಠಾಣೆಯಲ್ಲಿ ಸಂಭವಿಸಿರುವ ಕಸ್ಟೋಡಿಯಲ್ ಡೆತ್ ಆರೋಪದ ಘಟನೆ ಅತ್ಯಂತ ದುಃಖಕರ ಹಾಗೂ ಖಂಡನೀಯವಾಗಿದೆ ಎಂದು ಕರ್ನಾಟಕ ಮುಸ್ಲಿಂ ಸಂಘದ ರಾಜ್ಯಾಧ್ಯಕ್ಷ ಎಲ್.ಎಸ್.ಬಶೀರ್ ಅಹ್ಮದ್ ಹೇಳಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ನಾಗರಿಕರ ಜೀವ ಮತ್ತು ಹಕ್ಕುಗಳನ್ನು ರಕ್ಷಿಸಬೇಕಾದ ಪೊಲೀಸ್ ಇಲಾಖೆಯ ಮೇಲಿನ ಸಾರ್ವಜನಿಕರ ನಂಬಿಕೆಗೆ ಧಕ್ಕೆ ಉಂಟುಮಾಡುವಂತಹ ಯಾವುದೇ ಘಟನೆಗೆ ಅವಕಾಶ ಇರಬಾರದು ಎಂದು ತಿಳಿಸಿದ್ದಾರೆ.

ಪ್ರಕರಣದ ಸತ್ಯಾಸತ್ಯತೆ ಸಂಪೂರ್ಣವಾಗಿ ಹೊರಬರಲು ಸ್ವತಂತ್ರ ಹಾಗೂ ಪಾರದರ್ಶಕ ತನಿಖೆ ನಡೆಸಬೇಕು. ತಪ್ಪಿತಸ್ಥರು ಯಾರೇ ಆಗಿದ್ದರೂ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಕರ್ತವ್ಯ ನಿರ್ಲಕ್ಷ್ಯ ಹಾಗೂ ಆರೋಪ ಎದುರಿಸುತ್ತಿರುವ ಪೊಲೀಸ್ ಸಿಬ್ಬಂದಿಯ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ನ್ಯಾಯಾಂಗ ಪ್ರಕ್ರಿಯೆಯಲ್ಲಿ ತಪ್ಪಿತಸ್ಥರೆಂದು ಸಾಬೀತಾದರೆ ಅವರನ್ನು ಪೊಲೀಸ್ ಸೇವೆಯಿಂದಲೇ ವಜಾಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಮೃತ ಖಲೀಲ್ ಅವರ ಕುಟುಂಬಕ್ಕೆ ಮಾನವೀಯ ನೆಲೆಯಲ್ಲಿ ರಾಜ್ಯ ಸರ್ಕಾರ ತಕ್ಷಣವೇ 1 ಕೋಟಿ ರೂ. ಪರಿಹಾರ ಘೋಷಿಸಬೇಕು ಹಾಗೂ ಕುಟುಂಬದ ಅರ್ಹ ಸದಸ್ಯರೊಬ್ಬರಿಗೆ ಸರ್ಕಾರಿ ಉದ್ಯೋಗ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ರಾಜ್ಯದ ಗೃಹ ಸಚಿವರು ಸ್ವತಃ ಮೃತರ ಕುಟುಂಬವನ್ನು ಭೇಟಿ ಮಾಡಿ ಸಾಂತ್ವನ ಹೇಳುವುದರೊಂದಿಗೆ ನ್ಯಾಯ ದೊರೆಯುವ ವಿಶ್ವಾಸ ಮೂಡಿಸಬೇಕು. ಯಾವುದೇ ಒತ್ತಡಕ್ಕೂ ಮಣಿಯದೆ ಕಾನೂನಿನ ಚೌಕಟ್ಟಿನೊಳಗೆ ನಿಷ್ಪಕ್ಷಪಾತ ತನಿಖೆ ನಡೆಸಿ ನೊಂದ ಕುಟುಂಬಕ್ಕೆ ಶೀಘ್ರ ನ್ಯಾಯ ಒದಗಿಸಬೇಕು ಎಂದು ಎಲ್.ಎಸ್. ಬಶೀರ್ ಅಹ್ಮದ್ ಆಗ್ರಹಿಸಿದ್ದಾರೆ.



ಶರಣಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದಲ್ಲಿ ನಶಾ ಮುಕ್ತ ಯುವ ಸಂಕಲ್ಪ ಅಭಿಯಾನ

ಕಲಬುರಗಿ,ಆ.03-

ಮೈ ಭಾರತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ನ್ಯಾಷನಲ್ ಇನ್‌ಫಾರ್ಮ್ಯಾಟಿಕ್ಸ್ ಸೆಂಟರ್ (ಎನ್‌ಐಸಿ) ಸಹಯೋಗದಲ್ಲಿ ಆಯೋಜಿಸಲಾದ ''ವಿಕಸಿತ ಭಾರತಕ್ಕಾಗಿ ನಶಾ ಮುಕ್ತ ಯುವ ಸಂಕಲ್ಪ'' ರಾಷ್ಟ್ರೀಯ ಅಭಿಯಾನಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾನುವಾರ ವರ್ಚುವಲ್ ಮೂಲಕ ಚಾಲನೆ ನೀಡಿದರು.

ದೇಶಾದ್ಯಂತ ಸುಮಾರು 10 ಸಾವಿರಕ್ಕೂ ಅಧಿಕ ಕೇಂದ್ರಗಳಲ್ಲಿ ಕಾರ್ಯಕ್ರಮದ ನೇರ ಪ್ರಸಾರ ಏರ್ಪಡಿಸಲಾಗಿದ್ದು, ಕಲಬುರಗಿಯ ಶರಣಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ ಆಯ್ಕೆಯಾದ ಕೇಂದ್ರಗಳಲ್ಲಿ ಒಂದಾಗಿತ್ತು. ಕಾಲೇಜಿನ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಧಾನಮಂತ್ರಿಯವರ ಸಂದೇಶವನ್ನು ಆಲಿಸಿದರು.


ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಾತನಾಡಿ, ಇಂದಿನ ಸಮಾಜದಲ್ಲಿ ಯುವಜನತೆ ಹಾಗೂ ವಿದ್ಯಾರ್ಥಿಗಳು ದುಶ್ಚಟಗಳತ್ತ ಆಕರ್ಷಿತರಾಗುತ್ತಿರುವುದು ಕಳವಳಕಾರಿ ಬೆಳವಣಿಗೆಯಾಗಿದೆ. ಯುವಕರು ವ್ಯಸನಗಳಿಂದ ದೂರವಿದ್ದು ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ವ್ಯಸನವು ಕೇವಲ ವ್ಯಕ್ತಿಯನ್ನಷ್ಟೇ ಅಲ್ಲ, ಕುಟುಂಬ ಹಾಗೂ ಸಮಾಜದ ಮೇಲೂ ಗಂಭೀರ ದುಷ್ಪರಿಣಾಮ ಬೀರುತ್ತದೆ. ಒಬ್ಬ ವಿದ್ಯಾರ್ಥಿ ವ್ಯಸನಕ್ಕೆ ಬಲಿಯಾದರೆ ಅದು ಆತನ ಕನಸುಗಳಷ್ಟೇ ಅಲ್ಲ, ಪೋಷಕರ ನಿರೀಕ್ಷೆಗಳಿಗೂ ಹೊಡೆತ ನೀಡುತ್ತದೆ ಎಂದು ಅವರು ಹೇಳಿದರು.

''ವಿಕಸಿತ ಭಾರತಕ್ಕಾಗಿ ನಶಾ ಮುಕ್ತ ಯುವ'' ಅಭಿಯಾನವು ಯುವಜನರ ನೇತೃತ್ವದ ಜನಾಂದೋಲನವಾಗಿದ್ದು, ಜಾಗೃತಿ, ಕ್ರಿಯಾಶೀಲತೆ ಮತ್ತು ಸಮುದಾಯದ ಸಹಭಾಗಿತ್ವದ ಮೂಲಕ ಆರೋಗ್ಯಕರ ಹಾಗೂ ಮಾದಕವಸ್ತು ಮುಕ್ತ ಭಾರತ ನಿರ್ಮಾಣದ ಸಂಕಲ್ಪವನ್ನು ಬಲಪಡಿಸುವ ಉದ್ದೇಶ ಹೊಂದಿದೆ. ದೇಶಾದ್ಯಂತ ಒಂದು ಕೋಟಿಗೂ ಅಧಿಕ ವಿದ್ಯಾರ್ಥಿಗಳು ಮತ್ತು ಯುವಕರು ವ್ಯಸನ ವಿರೋಧಿ ಪ್ರತಿಜ್ಞೆ ಸ್ವೀಕರಿಸಿದರು.

ಪ್ರಧಾನಮಂತ್ರಿಗಳ ಭಾಷಣಕ್ಕೂ ಮುನ್ನ ನಡೆದ ಕಾಲೇಜು ಕಾರ್ಯಕ್ರಮದಲ್ಲಿ ಶರಣಬಸವ ವಿಶ್ವವಿದ್ಯಾಲಯದ ನಿರ್ದೇಶಕ ಡಾ. ವಿ.ಡಿ. ಮೈತ್ರಿ ಮಾತನಾಡಿ, ಯುವಕರು ವ್ಯಸನಮುಕ್ತ ಭಾರತ ನಿರ್ಮಾಣಕ್ಕೆ ಸಂಕಲ್ಪಬದ್ಧರಾಗಿ ಸದೃಢ ಸಮಾಜ ನಿರ್ಮಾಣದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು. ಬಳಿಕ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವ್ಯಸನಮುಕ್ತ ಭಾರತ ನಿರ್ಮಾಣದ ಪ್ರತಿಜ್ಞೆ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಬಿ. ರಾಮಕೃಷ್ಣ ರೆಡ್ಡಿ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳಾದ ಡಾ.ಬಸವರಾಜ್ ನರಿಬೋಳಿ ಹಾಗೂ ಡಾ. ಶ್ವೇತಾ ಸಿ. ಗುಮ್ಮಾ, ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿ ಅಭಿಯಾನಕ್ಕೆ ಬೆಂಬಲ ಸೂಚಿಸಿದರು.



ಕಲ್ಯಾಣ ಕರ್ನಾಟಕದ ಶೈಕ್ಷಣಿಕ ಕ್ರಾಂತಿಯ ಶಿಲ್ಪಿ ಮಹಾದೇವಪ್ಪ ರಾಂಪೂರೆ: ಶಶೀಲ್ ಜಿ.ನಮೋಶಿ

ಕಲಬುರಗಿ,ಆ.03-

ದಿ. ಮಹಾದೇವಪ್ಪ ರಾಂಪೂರೆಯವರು ಕಲ್ಯಾಣ ಕರ್ನಾಟಕದ ಶೈಕ್ಷಣಿಕ ಕ್ರಾಂತಿಯ ಶಿಲ್ಪಿಯಾಗಿದ್ದು, ಅವರು ಹಾಕಿದ ಭದ್ರ ಅಡಿಪಾಯದ ಫಲವಾಗಿ ಇಂದು ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ ಹೆಮ್ಮರವಾಗಿ ಬೆಳೆದಿದೆ ಎಂದು ಸಂಸ್ಥೆಯ ಅಧ್ಯಕ್ಷ ಶಶೀಲ್ ಜಿ. ನಮೋಶಿ ಹೇಳಿದರು.

ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ದಿ. ಮಹಾದೇವಪ್ಪ ರಾಂಪೂರೆಯವರ 105ನೇ ಜನ್ಮದಿನೋತ್ಸವ ಅಂಗವಾಗಿ ಆಯೋಜಿಸಿದ್ದ ನಿವೃತ್ತ ಸಿಬ್ಬಂದಿ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂಸ್ಥೆಯ ಬೆಳವಣಿಗೆಗೆ ಶಿಕ್ಷಕರು ಹಾಗೂ ಸಿಬ್ಬಂದಿಯ ಸಮರ್ಪಿತ ಸೇವೆಯೇ ಪ್ರಮುಖ ಕಾರಣವಾಗಿದೆ. ತಾವು ಇಂದು ಈ ಸ್ಥಾನದಲ್ಲಿರಲು ಸಂಸ್ಥೆ ಹಾಗೂ ಶಿಕ್ಷಕರ ಆಶೀರ್ವಾದವೇ ಕಾರಣವಾಗಿದೆ ಎಂದು ತಿಳಿಸಿದರು.

ರಾಂಪೂರೆಯವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದಷ್ಟೇ ಅಲ್ಲದೆ, ಕಲ್ಯಾಣ ಕರ್ನಾಟಕ ಭಾಗದ ಶೈಕ್ಷಣಿಕ ಅಭಿವೃದ್ಧಿಗೆ ಹೊಸ ದಿಕ್ಕು ತೋರಿದ ದೂರದೃಷ್ಟಿಯ ನಾಯಕರು. ಅವರ ಆದರ್ಶಗಳು ಇಂದಿಗೂ ಸಂಸ್ಥೆಗೆ ಮಾರ್ಗದರ್ಶಿಯಾಗಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಹಾಗೂ ಸಂಸ್ಥೆಯ ವಿವಿಧ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ 91 ಸಿಬ್ಬಂದಿಯನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಯಶೋದಾ ಆಸ್ಪತ್ರೆಯ ಸಂಸ್ಥಾಪಕ ಡಾ. ಬಸವರಾಜ ಕೋಳೂರ, ನಿವೃತ್ತ ಐಎಎಸ್ ಅಧಿಕಾರಿ ಅಮರನಾಥ ತಳವಡೆ, ಮಕ್ಕಳ ತಜ್ಞ ಡಾ. ವೀರಭದ್ರಪ್ಪ, ಉಪಾಧ್ಯಕ್ಷ ರಾಜಾ ಬಿ. ಭೀಮಳ್ಳಿ, ಆಡಳಿತ ಮಂಡಳಿ ಸದಸ್ಯ ಅರುಣಕುಮಾರ ಪಾಟೀಲ ಸೇರಿದಂತೆ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

ವೈದ್ಯ ವೃತ್ತಿ ಉದ್ಯೋಗವಲ್ಲ, ಸಮಾಜ ಸೇವೆಯ ಮಹತ್ತರ ಜವಾಬ್ದಾರಿ: ಡಾ. ರವೀಂದ್ರನಾಥ ಮೇಟಿ



ಕಲಬುರಗಿ,ಆ.03-

ವೈದ್ಯ ವೃತ್ತಿಯು ಕೇವಲ ಉದ್ಯೋಗವಲ್ಲ, ಸಮಾಜ ಸೇವೆಯ ಅತ್ಯುನ್ನತ ಜವಾಬ್ದಾರಿಯಾಗಿದೆ. ಸರ್ಕಾರಿ ವೈದ್ಯರು ಗ್ರಾಮೀಣ ಪ್ರದೇಶ ಸೇರಿದಂತೆ ಸಮಾಜದ ಎಲ್ಲ ವರ್ಗದ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ಮೂಲಕ ಆರೋಗ್ಯ ವ್ಯವಸ್ಥೆಯನ್ನು ಸದೃಢಗೊಳಿಸುತ್ತಿದ್ದಾರೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ (ಕೆಜಿಎಂಒಎ) ರಾಜ್ಯಾಧ್ಯಕ್ಷ ಡಾ. ರವೀಂದ್ರನಾಥ ಮೇಟಿ ಹೇಳಿದರು.

ನಗರದ ಸಾಯಿ ಮಂದಿರದ ಸಮೀಪದ ವಿ.ಎಲ್. ಪಾಟೀಲ್ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ವತಿಯಿಂದ ಆಯೋಜಿಸಿದ್ದ 202627ನೇ ಸಾಲಿನ ರಾಷ್ಟ್ರೀಯ ವೈದ್ಯರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದ ಆರೋಗ್ಯ ಕಾಪಾಡುವಲ್ಲಿ ವೈದ್ಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಸಾರ್ವಜನಿಕ ಆರೋಗ್ಯ ಸೇವೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸುವ ನಿಟ್ಟಿನಲ್ಲಿ ವೈದ್ಯರು ತಮ್ಮ ಸೇವಾ ಮನೋಭಾವವನ್ನು ನಿರಂತರವಾಗಿ ಉಳಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಲಬುರಗಿ ವಿಭಾಗದ ವಿಭಾಗೀಯ ಉಪನಿರ್ದೇಶಕರು ಹಾಗೂ ಜಿಲ್ಲಾ ಅಧ್ಯಕ್ಷರಾದ ಡಾ. ಶರಣಬಸಪ್ಪ ಗಣಜಲಖೇಡ್ ಮಾತನಾಡಿ, ವೈದ್ಯರ ವೃತ್ತಿಪರ ಬೆಳವಣಿಗೆ, ಸಂಘದ ಸದಸ್ಯರ ಏಕತೆ ಹಾಗೂ ಸಾರ್ವಜನಿಕ ಆರೋಗ್ಯ ಸೇವೆಯ ಗುಣಮಟ್ಟವನ್ನು ಹೆಚ್ಚಿಸಲು ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಕಲಬುರಗಿ ವಿಭಾಗೀಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಆಸ್ಪತ್ರೆಯ ಆರ್‌ಎಂಒ ಡಾ. ನಾಗರಾಜ ಪಾಟೀಲ ವಿಶೇಷ ಉಪಸ್ಥಿತರಿದ್ದು, ವೈದ್ಯರ ಸೇವೆಯ ಮಹತ್ವವನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು, ಸರ್ಕಾರಿ ವೈದ್ಯಾಧಿಕಾರಿಗಳು ಹಾಗೂ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.ವಿಭಾಗೀಯ ಸಹ ನಿರ್ದೇಶಕರಾದ ಡಾ. ಶಂಕರಪ್ಪ, ಜಿಲ್ಲಾ ಗೌರವಾಧ್ಯಕ್ಷರು ಹಾಗೂ ವಿಭಾಗೀಯ ಉಪನಿರ್ದೇಶಕರಾದ ಡಾ. ಅಂಬಾರಾಯ ರುದ್ರವಾಡಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಶರಣಬಸಪ್ಪ ಕ್ಯಾತನಾಳ, ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ. ರುಕಿಯಾ ಅಸ್ನಾರಬಾ ಹಾಗೂ ಹಿರಿಯ ಶಸ್ತ್ರಚಿಕಿತ್ಸಕರಾದ ಡಾ. ರಾಜಶೇಖರ ಮಾಲಿ ಉಪಸ್ಥಿತರಿದ್ದು, ಆರೋಗ್ಯ ಕ್ಷೇತ್ರದಲ್ಲಿ ವೈದ್ಯರು ಸಲ್ಲಿಸುತ್ತಿರುವ ನಿಸ್ವಾರ್ಥ ಸೇವೆಯನ್ನು ಶ್ಲಾಘಿಸಿದರು.

ವಿಶೇಷ ಆಹ್ವಾನಿತರಾಗಿ ರಾಜ್ಯ ಉಪಾಧ್ಯಕ್ಷ ಡಾ. ಮೋಹನ್, ವಿಭಾಗೀಯ ಜಂಟಿ ಕಾರ್ಯದರ್ಶಿ ಡಾ. ರುದ್ರಗೌಡ, ರಾಜ್ಯ ಜಂಟಿ ಕಾರ್ಯದರ್ಶಿ ಡಾ. ಸತೀಶ್, ಆಂತರಿಕ ಲೆಕ್ಕ ಪರಿಶೋಧಕಿ ಡಾ. ಶೋಭಾ ಟಿ.ಆರ್., ಸಂಘದ ವ್ಯವಸ್ಥಾಪಕ ಕೃಷ್ಣಪ್ಪ, ಶ್ರೀ ಆಸ್ಪತ್ರೆಯ ಡಾ. ಸಚಿನ್, ಡಾ. ಶ್ವೇತ, ವಿ.ಎಲ್. ಪಾಟೀಲ್ ಆಸ್ಪತ್ರೆಯ ಡಾ. ರವೀಂದ್ರ ಪಾಟೀಲ್, ಸಂಜನಾ ಆಸ್ಪತ್ರೆಯ ಡಾ. ಅಂಬರಪ್ಪ ಜಂಪಾ, ಶಾರದಾಂಬೆ ಆಸ್ಪತ್ರೆಯ ಡಾ. ಗಿರೀಶ್ ಸ್ವಾಮಿ ಹಾಗೂ ಡಾ. ದೀಪ ಸ್ವಾಮಿ ಸೇರಿದಂತೆ ಹಲವರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ವೈದ್ಯರು, ನಿವೃತ್ತ ವೈದ್ಯರು, ವೈದ್ಯರ ಪ್ರತಿಭಾವಂತ ಮಕ್ಕಳು ಹಾಗೂ ವಿವಿಧ ಕ್ರೀಡಾಕೂಟಗಳಲ್ಲಿ ವಿಜೇತರಾದ ವೈದ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು. ಬಳಿಕ ವೈದ್ಯರು ಹಾಗೂ ಅವರ ಕುಟುಂಬ ಸದಸ್ಯರು ನೀಡಿದ ಸಾಂಸ್ಕೃತಿಕ ಕಾರ್ಯಕ್ರಮಗಳು ಸಮಾರಂಭದ ವಿಶೇಷ ಆಕರ್ಷಣೆಯಾಗಿದ್ದವು.

ಕಾರ್ಯಕ್ರಮದ ಯಶಸ್ಸಿಗೆ ಕಲಬುರಗಿ ಶಾಖೆಯ ಉಪಾಧ್ಯಕ್ಷರಾದ ಡಾ. ವಿನೋದಕುಮಾರ ಎಸ್.ಎಚ್., ಡಾ. ಇರ್ಫಾನ್ ಅಲಿ, ಕಾರ್ಯದರ್ಶಿ ಡಾ. ಸಂತೋಷ ಆಲಗೂರ, ಖಜಾಂಚಿ ಡಾ. ದೀಪಕ್ ಕುಮಾರ ರಾಠೋಡ, ಜಂಟಿ ಕಾರ್ಯದರ್ಶಿಗಳಾದ ಡಾ. ಸಂಧ್ಯಾ ಕಾನೇಕರ್ ಹಾಗೂ ಡಾ. ಅಮೃತಾ ಕುಲಕರ್ಣಿ ಸೇರಿದಂತೆ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಶ್ರಮಿಸಿದರು.

ಬಳ್ಳಾರಿಯಲ್ಲಿ ಶಾಂತಿಯುತವಾಗಿ ನಡೆದ ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆ



ಬಳ್ಳಾರಿ,ಆ.03-

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವತಿಯಿಂದ ಭಾನುವಾರ ಬಳ್ಳಾರಿ ಜಿಲ್ಲೆಯ 25 ಪರೀಕ್ಷಾ ಕೇಂದ್ರಗಳಲ್ಲಿ ಪೊಲೀಸ್ ಕಾನ್‌ಸ್ಟೇಬಲ್ (ಸಿವಿಲ್) ಹುದ್ದೆಗಳ ನೇರ ನೇಮಕಾತಿಯ ಲಿಖಿತ ಪರೀಕ್ಷೆ ಶಾಂತಿಯುತವಾಗಿ ನಡೆಯಿತು.

ಬೆಳಿಗ್ಗೆ 10.30ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಮಿಕ್ಕುಳಿದ ವೃಂದ ( ) ಹುದ್ದೆಗಳಿಗೆ ಹಾಗೂ ಸಂಜೆ 4ರಿಂದ 5.30 ಗಂಟೆಯವರೆಗೆ ಸ್ಥಳೀಯ ವೃಂದ ( ) ಹುದ್ದೆಗಳಿಗೆ ಪರೀಕ್ಷೆ ನಡೆಸಲಾಯಿತು.

ಪರೀಕ್ಷೆಗೆ ಒಟ್ಟು 15,804 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಬಳ್ಳಾರಿ ನಗರದ 18 ಪರೀಕ್ಷಾ ಕೇಂದ್ರಗಳಲ್ಲಿ 11,768 ಅಭ್ಯರ್ಥಿಗಳು

ಹಾಗೂ ಸಂಡೂರು ತಾಲೂಕಿನ 7 ಪರೀಕ್ಷಾ ಕೇಂದ್ರಗಳಲ್ಲಿ 4,036 ಅಭ್ಯರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರು.

ಬೆಳಿಗ್ಗೆ 8 ಗಂಟೆಯಿಂದಲೇ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಆಗಮಿಸಲು ಆರಂಭಿಸಿದರು. ನಗರದ ಸರಳಾದೇವಿ ಕಾಲೇಜು ಸೇರಿದಂತೆ ವಿವಿಧ ಪರೀಕ್ಷಾ ಕೇಂದ್ರಗಳ ಎದುರು ಅಭ್ಯರ್ಥಿಗಳು ಸರತಿ ಸಾಲಿನಲ್ಲಿ ನಿಂತು ತಪಾಸಣೆಯ ಬಳಿಕ ಪರೀಕ್ಷಾ ಕೊಠಡಿಗಳಿಗೆ ಪ್ರವೇಶಿಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದ್ದು, ಅಗತ್ಯ ಭದ್ರತಾ ಕ್ರಮಗಳೊಂದಿಗೆ ಯಾವುದೇ ಅಹಿತಕರ ಘಟನೆ ನಡೆಯದೆ ಪರೀಕ್ಷೆಗಳು ಸುಸೂತ್ರವಾಗಿ ಹಾಗೂ ಶಾಂತಿಯುತವಾಗಿ ನಡೆದವು.

ಸುಗಮ ಸಂಗೀತ ತರಬೇತಿ ವಿದ್ಯಾರ್ಥಿನಿಯರ ಪ್ರತಿಭೆಗೆ ವೇದಿಕೆ: ಶಿಕಾರಿ ರಾಮು



ಬಳ್ಳಾರಿ / ಕಂಪ್ಲಿ,ಆ.03-

ಗುರುಗಳು ನೀಡುವ ವಿದ್ಯೆ ಜೀವನದ ಅತ್ಯಮೂಲ್ಯವಾದ ಕೊಡುಗೆಯಾಗಿದ್ದು, ಅದನ್ನು ಸದ್ಬಳಕೆ ಮಾಡಿಕೊಂಡು ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಬೆಳೆಸಿಕೊಳ್ಳಬೇಕು ಎಂದು ತಾಷೆ ರಾಮ್‌ಡೋಲ್ ವಿದ್ವಾಂಸ ಶಿಕಾರಿ ರಾಮು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದಲ್ಲಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಯರಿಗಾಗಿ ಆಯೋಜಿಸಿದ್ದ ಸುಗಮ ಸಂಗೀತ ಕಲಾ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ತರಬೇತಿ ವಿದ್ಯಾರ್ಥಿನಿಯರಿಗೆ ತಮ್ಮಲ್ಲಿರುವ ಸಂಗೀತ ಪ್ರತಿಭೆಯನ್ನು ಗುರುತಿಸಿ ಬೆಳೆಸಿಕೊಳ್ಳಲು ಉತ್ತಮ ವೇದಿಕೆಯಾಗಿದ್ದು, ಅದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ವಿದ್ಯಾರ್ಥಿನಿಲಯದ ಪಾಲಕ ವಿರೂಪಾಕ್ಷ ಮಾತನಾಡಿ, ವಿದ್ಯಾರ್ಥಿಗಳು ಸಿಗುವ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಂಡು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಬೇಕು. ಪ್ರತಿಭೆಯನ್ನು ಗುರುತಿಸಿಕೊಂಡಾಗ ಮಾತ್ರ ಶಾಲೆ ಹಾಗೂ ಕುಟುಂಬಕ್ಕೆ ಕೀರ್ತಿ ತರಲು ಸಾಧ್ಯ ಎಂದು ಹೇಳಿದರು.

ವಿದ್ಯಾರ್ಥಿನಿಲಯದಲ್ಲಿ ಇಂತಹ ತರಬೇತಿ ಕಾರ್ಯಕ್ರಮ ಆಯೋಜಿಸಿರುವುದು ಹೆಮ್ಮೆಯ ಸಂಗತಿಯಾಗಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯವನ್ನು ಅಭಿನಂದಿಸಿದರು.

ಶೈಲಾ ದೇವರುಮನಿ ಮಾತನಾಡಿ, ಆರು ತಿಂಗಳ ಕಾಲ ನಡೆಯಲಿರುವ ಈ ತರಬೇತಿ ವಿದ್ಯಾರ್ಥಿನಿಯರಿಗೆ ಸಂಗೀತ ಕಲಿಕೆಗೆ ಉತ್ತಮ ಅವಕಾಶವಾಗಲಿದೆ ಎಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ. ನಾಗರಾಜ ಅವರು ಸ್ವಾಗತಿಸಿ, ಕಾರ್ಯಕ್ರಮದ ಉದ್ದೇಶ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರು, ವಿದ್ಯಾರ್ಥಿನಿಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಲೋಕಭವನದಲ್ಲಿ ಡಿಕೆಶಿ ವಿಸ್ತರಿತ ಮಂತ್ರಿಮಂಡಲದ ನೂತನ ಸಚಿವರಾಗಿ 19 ಮಂದಿ ಪ್ರಮಾಣವಚನ ಸ್ವೀಕಾರ

ಕೊನೆಯದಾಗಿ ಜಮೀರ್ ಅಹಮದ್ ಖಾನ್ ಅಲ್ಲಾ ಹಾಗೂ ತಾಯಿ ಹೆಸರಿನಲ್ಲಿ ಇಂಗ್ಲಿಷ್‌ನಲ್ಲಿ ಪ್ರಮಾಣವಚನ ಓದಿದರು. ವಂದೇ ಮಾತರಂ ಗೀತೆ ಬಳಿಕ ಜನ ಗಣ ಮನ ಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಸಿಎಂ ಸಿದ್ದರಾಮಯ್ಯ ಗೈರು: ಲೋಕಭವನದಲ್ಲಿ ನಡೆದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಗೈರು ಎದ್ದು ಕಂಡಿತು. ಲೋಕಭವನದಲ್ಲಿ ನೂತನ ಸಚಿವರ ಪ್ರಮಾಣವಚನ ಕಾರ್ಯಕ್ರಮ ನಿಗದಿಯಾಗಿದ್ದರೂ, ಅದರಲ್ಲಿ ಭಾಗವಹಿಸದೇ ತಮ್ಮ ಅಧಿಕೃತ ಕಾವೇರಿ ನಿವಾಸದಲ್ಲೇ ಉಳಿದುಕೊಂಡಿದ್ದರು.

ಸಚಿವ ಸಂಪುಟ ವಿಸ್ತರಣೆ ಬೆನ್ನಲ್ಲೇ ಹಲವು ಶಾಸಕರಲ್ಲಿ ಅಸಮಾಧಾನ ಹೊಗೆಯಾಡುತ್ತಿದೆ. ಇದರ ಮಧ್ಯೆಯೇ, ಸಿದ್ದರಾಮಯ್ಯ ಅವರ ಈ ನಡೆ ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ನೂತನ ಸಚಿವರ ಪದಗ್ರಹಣಕ್ಕೆ ಮಾಜಿ ಸಿಎಂ ಗೈರಾಗಿರುವುದು ಕಾಂಗ್ರೆಸ್ ಪಕ್ಷದ ಆಂತರಿಕ ಅಸಮಾಧಾನದ ಫಲಶ್ರುತಿಯೇ ಎಂಬ ಚರ್ಚೆ ಹುಟ್ಟುಹಾಕಿದೆ.

ಪ್ರಮಾಣವಚನ ಸಮಾರಂಭದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ, ಕೆ.ಪಿ.ಸಿ.ಸಿ. ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಸೇರಿದಂತೆ ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಹಿರಿಯ ನಾಯಕರು ಹಾಗೂ ವಿವಿಧ ಇಲಾಖೆಯ ಉನ್ನತಾಧಿಕಾರಿಗಳು ಉಪಸ್ಥಿತರಿದ್ದರು.

ಮಾವಿನಕೆರೆ ಆಸ್ಪತ್ರೆಯಲ್ಲಿ ಎದೆ ಹಾಲಿನ ಮಹತ್ವ ಕಾರ್ಯಕ್ರಮಕ್ಕೆ ಚಾಲನೆ

ನವೋದಯ ಮಹಾವಿದ್ಯಾಲಯದ ಮಕ್ಕಳ ತಜ್ಞ ಡಾ.ಮಹೀಜ್, ಪ್ರೋಪೇಸರ್ ಡಾ.ಹರ್ಷಿಯಾ ತರನುಮ್, ರಿಮ್ಸ್ ಮಕ್ಕಳ ವಿಭಾಗದ ಡಾ.ಶಾಲಂ ಪಾಷಾ ಹಾಗೂ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ ಮಾತನಾಡಿದರು.

ಕಾರ್ಯಕ್ರಮದಲ್ಲಿ ರಿಮ್ಸ್ ಮಕ್ಕಳ ತಜ್ಞೆ ಡಾ.ಶೀಲ್ವಾ, ಜಹೀರಾಬಾದ್ ವೈದ್ಯಾಧಿಕಾರಿ ಡಾ.ಆಸ್ಪಾಕ್ ಹುಸೇನ್, ನವೋದಯ ಕಾಲೇಜಿನ ಪಿಎಸ್ಎಮ್ ವಿಭಾಗದ ಡಾ.ಲಕ್ಷ್ಮೀ, ಡಾ.ಭವಾನಿ, ಡಾ.ಭಾಗ್ಯಶ್ರೀ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಹಿರಿಯ ಹೆಚ್ಐಓ ಸುರೇಶ್, ಶೂಶ್ರೂಷಣಾಧಿಕಾರಿ ಅನಸೂಯಾ, ಮಮತ, ಗಿರಿಜಾ, ಎಮ್‌ಟಿಎಸ್ ಸಂಧ್ಯಾ, ಪಿಹೆಚ್‌ಸಿಓ ಮರಿಯಾರಾಣಿ, ಶಾರದಾ, ಮಹೇಶ್ವರಿ, ಮಲ್ಲೇಶ್ವರಿ, ಅನ್ನಪೂರ್ಣ, ಮಲ್ಲಮ್ಮ, ಹೆಚ್ಐಓ ಶೃತಿ ಸೇರಿದಂತೆ ಆಶಾ ಕಾರ್ಯಕರ್ತೆಯರು, ತಾಯಂದಿರು, ಇತರರು ಇದ್ದರು.

ಶಾಸಕರು, 4 ಎಂಎಲ್‌ಸಿ ಇರುವ ರಾಯಚೂರು ಜಿಲ್ಲೆಗೆ ಒಲಿಯದ ಸಚಿವ ಸ್ಥಾನ : ಕಾರ್ಯಕರ್ತರಿಂದ ಅಸಮಾಧಾನ

ನಾಯಕರಿಗೆ ಅವಕಾಶ ನೀಡಬಹುದಾಗಿತ್ತು ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ.

ಕಲ್ಯಾಣ ಕರ್ನಾಟಕ ಭಾಗದ ರಾಯಚೂರು ಜಿಲ್ಲೆಗೆ ಬಿಜೆಪಿ ಹಾಗೂ ಕಾಂಗ್ರೆಸ್ ಸರ್ಕಾರಗಳ ಅವಧಿಯಲ್ಲಿಯೂ ಸಮರ್ಪಕ ಸಚಿವ ಪ್ರಾತಿನಿಧ್ಯ ದೊರೆಯುತ್ತಿಲ್ಲ ಎಂಬ ಟೀಕೆಗಳು ಕೇಳಿಬಂದಿವೆ. 2023ರಲ್ಲಿ ಎನ್.ಎಸ್. ಬೋಸರಾಜು ಅವರಿಗೆ ಸಚಿವ ಸ್ಥಾನ ನೀಡಲಾಗಿದ್ದರೂ ಜಿಲ್ಲಾ ಉಸ್ತುವಾರಿ ಹೊಣೆ ಕಲಬುರಗಿ ಜಿಲ್ಲೆಯ ಸಚಿವರಿಗೆ ನೀಡಲಾಗಿತ್ತು. ಈಗಲೂ ಜಿಲ್ಲೆಗೆ ಯಾವುದೇ ಪ್ರಾತಿನಿಧ್ಯ ನೀಡದಿರುವುದನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನಿಸಲಾಗುತ್ತಿದೆ.

ಕೆಪಿಸಿಸಿ ಹಿಂದುಳಿದ ವರ್ಗಗಳ ಹಿರಿಯ ಉಪಾಧ್ಯಕ್ಷ ತಲಕಾಯ ಮಾರೆಪ್ಪ ಅವರು ಪ್ರತಿಕ್ರಿಯಿಸಿ, ಕಾಂಗ್ರೆಸ್ ಪಕ್ಷವನ್ನು ಜಿಲ್ಲೆಯಲ್ಲಿ ಬಲಪಡಿಸಿದ ಹಿರಿಯ ದಲಿತ ನಾಯಕ ಎ. ವಸಂತಕುಮಾರ್ ಹಾಗೂ ಲಿಂಗಾಯತ ಸಮುದಾಯದ ಪ್ರಭಾವಿ ನಾಯಕ ಹಂಪನಗೌಡ ಬಾದರ್ಲಿ ಅವರು ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಗಳಾಗಿದ್ದರು. ಕೊನೆಯ ಕ್ಷಣದವರೆಗೂ ಅವರ ಹೆಸರುಗಳು ಚರ್ಚೆಯಲ್ಲಿದ್ದರೂ ಅಂತಿಮ ಪಟ್ಟಿಯಲ್ಲಿ ಕೈಬಿಡಲಾಗಿದೆ. ಇದರಿಂದ ಅವರ ಬೆಂಬಲಿಗರು ಹಾಗೂ ಪಕ್ಷದ ಕಾರ್ಯಕರ್ತರಲ್ಲಿ ತೀವ್ರ ಅಸಮಾಧಾನ ಉಂಟಾಗಿದೆ ಎಂದು ಹೇಳಿದರು.

ಇಬ್ಬರೂ ನಾಯಕರು ಪಕ್ಷದ ಪರವಾಗಿ ವಿವಿಧ ರಾಜ್ಯಗಳ ಚುನಾವಣೆಯಲ್ಲಿ ವೀಕ್ಷಕರಾಗಿ ಕಾರ್ಯನಿರ್ವಹಿಸಿ ಸಂಘಟನಾ ಸಾಮರ್ಥ್ಯ ತೋರಿದ್ದಾರೆ. ಇಂತಹ ನಾಯಕರನ್ನು ಸಚಿವ ಸಂಪುಟದಿಂದ ಹೊರಗಿಡಬಾರದಾಗಿತ್ತು. ಭವಿಷ್ಯದ ಚುನಾವಣೆಗಳ ಮೇಲೆ ಇದರ ಪರಿಣಾಮ ಬೀಳುವ ಸಾಧ್ಯತೆ ಇದ್ದು, ಅವರಿಗೆ ಸಂಪುಟ ದರ್ಜೆಯ ಸ್ಥಾನಮಾನ ನೀಡುವ ಬಗ್ಗೆ ಪಕ್ಷದ ಹೈಕಮಾಂಡ್ ಪರಿಗಣಿಸಬೇಕು ಎಂದು ಅವರು ಒತ್ತಾಯಿಸಿದರು.

ಬರಗಾಲ ಘೋಷಿಸಿ, ರೈತರ ಸಾಲಮನ್ನಾ ಮಾಡಿ-ನರಸಿಂಹ ನಾಯಕ

ಸ್ಥಗಿತಗೊಂಡ ಡಿ. ರಾಂಪುರ ಏತ ನೀರಾವರಿ ಯೋಜನೆಯನ್ನು ಪುನರಾರಂಭಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಗೋವಿಂದ ನಾಯಕ, ಮಲ್ಲನಗೌಡ, ಮಂಜುಳಾ, ಧರ್ಮರೆಡ್ಡಿ, ನರಸಿಂಹ ರೆಡ್ಡಿ ಗಾಜರಾಳ ಹಾಗೂ ಸಂಘದ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೇಘನಾಥ ನಾಯಕ ಕೊಲೆ ಪ್ರಕರಣ ಸಿಐಡಿಗೆ ವಹಿಸಿ: ಕರ್ನಾಟಕ ರಕ್ಷಣಾ ವೇದಿಕೆ ಆಗ್ರಹ

ತನಿಖೆ ಮೂಲಕ ಪತ್ತೆಹಚ್ಚಬೇಕು. ಪ್ರಕರಣದ ಹಿಂದೆ ಯಾರೇ ಇದ್ದರೂ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮೃತರ ಕುಟುಂಬಕ್ಕೆ ₹1 ಕೋಟಿ ಪರಿಹಾರ, ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ಉದ್ಯೋಗ, ಮೃತರ ಪತ್ನಿ ಹಾಗೂ ಮಗಳ ಚಿಕಿತ್ಸೆಯ ಸಂಪೂರ್ಣ ವೆಚ್ಚವನ್ನು ಸರ್ಕಾರವೇ ಭರಿಸುವುದು, ಆರೋಪಿಗಳ ವಿರುದ್ಧ ಕಠಿಣ ಕ್ರಮ, ಪೆಟ್ರೋಲ್ ಬಂಕಿನ ಪರವಾನಗಿ ರದ್ದುಪಡಿಸಿ ಶಾಶ್ವತವಾಗಿ ಮುಚ್ಚಿಸುವುದು ಹಾಗೂ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸುವಂತೆ ಸಂಘಟನೆ ಸರ್ಕಾರಕ್ಕೆ ಮನವಿ ಮಾಡಿತು.

ಬೇಡಿಕೆಗಳನ್ನು ಶೀಘ್ರ ಈಡೇರಿಸದಿದ್ದರೆ ಹಂತ ಹಂತವಾಗಿ ಉಗ್ರ ಹೋರಾಟ ನಡೆಸಲಾಗುವುದು ಎಂದು ವಿನೋದ್ ರೆಡ್ಡಿ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ನಾಗೇಂದ್ರ, ನರಸರೆಡ್ಡಿ, ಎಂ.ಡಿ. ಸಾಧಿಕ್ ಹಾಗೂ ಎಂ.ಎಸ್. ವೆಂಕಟೇಶ್ ಉಪಸ್ಥಿತರಿದ್ದರು.

ಸಚಿವ ರಾಮಲಿಂಗಾರೆಡ್ಡಿ ಅವರು ಭೇಟಿ ನೀಡಿ ಪರಿಶೀಲನೆ

ರೈತರಿಗೆ ಕಾಲುವೆ ನೀರು ಕೊಡಲು ಆಗುವದಿಲ್ಲಾ ಒಂದೊಮ್ಮೆ ಆಗಷ್ಟ ವೇಳೆಗೆ ಉತ್ತಮ ಮಳೆಯಾಗುವ ನಿರೀಕ್ಷೆ ಇದೆ ಸದ್ಯ ಆಲಮಟ್ಟಿ ಶಾಸ್ತ್ರೀ ಜಲಾಶಯಕ್ಕೆ ಅಂದಾಜು 40 ಸಾವಿರ ಕ್ಯೂಸೆಕ್ ಒಳಹರಿವು ಇದೆ ನಿತ್ಯ ಜಲಾಶಯದಲ್ಲಿ 3 ರಿಂದ 4 ಟಿಎಂಸಿಯಷ್ಟು ನೀರು ಸಂಗ್ರವಾಗುತ್ತಿದೆ.

ಒಂದೊಮ್ಮೆ ಮಹಾರಾಷ್ಟದ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ವ್ಯಾಪಕ ಮಳೆಯಾದರೆ ನಿತ್ಯ 10 ಟಿಎಂಸಿಯಷ್ಟು ನೀರಿನ ಸಂಗ್ರಹ ಹೆಚ್ಚಾದರೆ ಅವಳಿ ಜಲಾಶಯಗಳು ನಿರೀಕ್ಷೆಯಂತೆ ಭರ್ತಿಯಾದರೆ ಕಾಲುವೆ ಜಾಲಗಳಿಗೆ ನೀರು ಹರಿಸಲು ಯೋಚಿಸಬಹುದಾಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಚಿವರು ಈಗಾಗಲೇ ಸಿಎಂ ಡಿ. ಕೆ ಶಿವಕುಮಾರ್ ಅವರು ಜಲಾಶಯ ನೀರು ನಂಬಿ ವ್ಯವಸಾಯ ಮಾಡದಂತೆ ರೈತರಲ್ಲಿ ಮನವಿ ಮಾಡಿದ್ದಾರೆ ಜೊತೆಗೆ ದೇಶದ 12 ದೊಡ್ಡ ರಾಜ್ಯಗಳಿಗೆ ಬರಗಾಲ ಆವರಿಸಿದೆ ರಾಜ್ಯದ ಅಂದಾಜು 175 ಬರಗಾಲ ಪೀಡಿತ ತಾಲ್ಲೂಕುಗಳಾಗಿವೆ ಎಂದು ವಿವರಿಸಿದ ಸಚಿವರು ಬಸವಸಾಗರ ಜಲಾಶಯದ ಮುಂಭಾಗದಲ್ಲಿ ಆಲಮಟ್ಟಿ ಮಾದರಿಯ ಸುಂದರ ಉದ್ಯಾವನ ನಿರ್ಮಿಸಲು ಕೇಂದ್ರ ಸರ್ಕಾರದ ಡ್ರಿಪ್ ಯೋಜನೆ ಅಡಿಯಲ್ಲಿ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಶೀಘ್ರವಾಗಿ ಉದ್ಯಾನ ನಿರ್ಮಾಣಕ್ಕೆ ಮುಂದಾಗುವದಾಗಿ ಹೇಳಿದರು.

ಬೂದಿಹಾಳ ಪೀರಾಪುರ ಹಂತ 2 ಯೋಜನೆ ಅಡಿಯಲ್ಲಿ ಹೊಲಗಾಲುವೆಗಳು ನಿರ್ಮಿಸುವ ಮೂಲಕ ನಿಗದಿ ಪಡಿಸಿದ ಜಮೀನುಗಳಿಗೆ ನೀರಿನ ಸೌಕರ್ಯ ಕಲ್ಪಿಸಲಾಗುತ್ತದೆ ಎಂದು ಹೇಳಿದ ಸಚಿವರು ಕೆಬಿಜೆಎನ್‌ಎಲ್ ಅಡಿಯಲ್ಲಿ ಖಾಲಿ ಇರುವ ಪ್ರದೇಶದಲ್ಲಿ ಕೆರೆಗಳನ್ನು ನಿರ್ಮಾಣ ಬಗ್ಗೆ ಪರಿಶೀಲನೆ ಮಾಡಲಾಗುತ್ತದೆ ಮತ್ತು ವಿಶೇಷ ಯೋಜನೆ ಅಡಿಯಲ್ಲಿ ಸೌರ ವಿದ್ಯುತ್ ತಯಾರಿಕೆಗೂ ಯೋಜಿಸಲಾಗುತ್ತಿದೆ ಮತ್ತು 12 ವರ್ಷಗಳಿಂದ ನಿಂತು ಹೋಗಿರುವ ನಂದವಾಡಿ ಏತ ನೀರಾವರಿ ಯೋಜನೆ ಜಾರಿಗೆ ಕ್ರಮ ವಹಿಸುವದಾಗಿ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಸಚಿವರು ಉತ್ತರಿಸಿದರು.

ಇದೇ ಸಂದರ್ಭದಲ್ಲಿ ಜಲಾಶಯದ ವೀಕ್ಷಣೆ ಗೇಟ್ಗಳ ಕಾರ್ಯಚರಣೆ, ನಿರ್ವಹಣೆ ಮತ್ತು ಎಲ್ ಎಲ್ ಬಿಸಿ ಕಾಲುವೆಗಳಿಗೆ ಅಳವಡಿಸಿರುವ ಸ್ಕಾಡ್ ಗೇಟ್ಸ್ ಕಾರ್ಯಚರಣೆ ನಿರ್ವಹಣೆ ಹಾಗೂ ನಿಯಂತ್ರಣ ಕೇಂದ್ರಕ್ಕೆ ಭೇಟಿ ನೀಡಿ ಗುತ್ತಿಗೆ ವಹಿಸಿಕೊಂಡಿರುವ ಮೆಕಾಟ್ರಾನಿಕ್ಸ್ ಕಂಪನಿಯ ಇಂಜನೀಯರಿಗಳಿಂದ ವಿಡಿಯೋ ವೀಕ್ಷಣೆ ಮಾಡುವ ಮೂಲಕ ಮಾಹಿತಿ ಪಡೆದುಕೊಂಡರು.

ಜಲಾಶಯದ ಹಿನ್ನೀರು ವ್ಯಾಪ್ತಿಯಲ್ಲಿ ಪ್ರಗತಿ ಹಂತದದಲ್ಲಿರುವ ಬೂದಿಹಾಳ ಪೀರಾಪುರ ಎರಡನೇ ಹಂತದ ಕಾಮಗಾರಿ ವೀಕ್ಷಣೆ ಮಾಡಿ ಕಾರ್ಯವಿಧಾನದ ಕುರಿತು ಪರಿವೀಕ್ಷಣೆ ಮಾಡಿ ಮಾಹಿತಿ ಪಡೆದರು.

ಮುದ್ದೇಬಿಹಾಳ ಶಾಸಕ ಸಿ. ಎಸ್ ಅಪ್ಪಾಜಿ ನಾಡಗೌಡ, ಸುರಪುರ ಶಾಸಕರಾದ ರಾಜಾ ವೇಣುಗೋಪಾಲ ನಾಯಕ, ಕೆಬಿಜೆಎನ್‌ಎಲ್ ಎಂ. ಡಿ ಕೃಷ್ಣಮೂರ್ತಿ ಕುಲಕರ್ಣಿ, ಡಿಸಿ ರಾಹುಲ್ ತುಕಾರಾಮ್ ಪಾಂಡ್ವೆ, ಎ. ಸ್ಪಿ ಪೃಥ್ವಿಕ್ ಶಂಕರ, ಸಿಇ ಜಿ. ಜಿ ಪವಾರ, ಎಸ್ ಇ ರಮೇಶ ರಾಠೋಡ, ರಾಜಾ ಕುಮಾರನಾಯಕ, ರಾಜಾ ಸುಶಾಂತನಾಯಕ, ಮುಖಂಡರಾದ ರಾಜಶೇಖರಗೌಡ ಪಾಟೀಲ್, ಯಂಕೂಬ ಸಾಹುಕಾರ, ರವಿಚಂದ್ರ ಸಾಹುಕಾರ, ನಿಂಗಣ್ಣ ಬಾಚಿಮಟ್ಟಿ, ಗುಂಡಪ್ಪ ಸೊಲ್ಲಾಪುರ, ಶಾಂತಪ್ಪ ಮೇಸ್ತಕ್, ಅಮರೇಶ ಕೋಳುರ, ತಿಮ್ಮಣ್ಣ, ವಿರೇಶ ಸೇರಿದಂತೆ ನಾರಾಯಣಪುರ ಸುತ್ತಮುತ್ತಲಿನ ಗ್ರಾಮಗಳ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತೆಯರು ಇದ್ದರು.

ಇಇ ಹಣಮಂತ ಕೊಣ್ಣೂರು, ಸುರೇಂದ್ರರೆಡ್ಡಿ, ಎಇಇಗಳಾದ ಮಹಾದೇವಪ್ಪ ಭಜಂತ್ರಿ, ರಾಘವೇಂದ್ರ ಕುಲಕರ್ಣಿ, ಶಂಕರ ಹಡಲಗೇರಿ, ಬಸವರಾಜ, ಎಇಗಳಾದ

ಶ್ರೀಶೈಲ್ ಬಿಜ್ಜೂರ, ವಿಜಯಕುಮಾರ ಅರಳಿ, ಬಾಲಸುಬ್ರಹ್ಮಣ್ಯಂ, ಬಾಲಚಂದ್ರ, ಸೇರಿ ಇತರೆ ಅಧಿಕಾರಿ ವರ್ಗದವರು ಸಿಬ್ಬಂದಿಗಳು ಇದ್ದರು.

ನಿವೃತ್ತಿ ಜೀವನ ಸಾಧನೆಗೆ ಅಂತ್ಯವಲ್ಲ, ಹೊಸ ಅವಕಾಶ

ಕಲಬುರಗಿ,ಆ.03-

ನಿವೃತ್ತಿ ಜೀವನವು ಸಾಧನೆಗೆ ಅಂತ್ಯವಲ್ಲ, ಸಮಾಜಮುಖಿ ಹಾಗೂ ಸಾರ್ಥಕ ಬದುಕಿಗೆ ಹೊಸ ಅವಕಾಶವಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಗೌರವ ಕಾರ್ಯದರ್ಶಿ ಶಿವರಾಜ ಅಂಡಗಿ ಹೇಳಿದರು.

ನಗರದ ದೇವಿನಗರದಲ್ಲಿರುವ ಸಿದ್ಧರೂಢ ಸತ್ಸಂಗ ಸಮಿತಿ ಹಾಗೂ ಶ್ರೀ ರಾಮಲಿಂಗ ಚೌಡೇಶ್ವರಿ ಸೇವಾ ಪ್ರತಿಷ್ಠಾನ (ರಿ) ಸಂಯುಕ್ತಾಶ್ರಯದಲ್ಲಿ ಭಾನುವಾರ ಆಯೋಜಿಸಿದ್ದ ಗುರುನಾಥ ಭೀಮಳ್ಳಿ ವಿರಚಿತ ಅಂತರ್ಜ್ಯೋತಿ ಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಕರ್ತವ್ಯದ ಜೊತೆಗೆ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಬದುಕನ್ನು ಅಳವಡಿಸಿಕೊಂಡು, ನಿವೃತ್ತಿಯ ನಂತರ ತಮ್ಮ ಜ್ಞಾನ ಮತ್ತು ಅನುಭವಗಳನ್ನು ಸಮಾಜದೊಂದಿಗೆ ಹಂಚಿಕೊಳ್ಳುವ ಉದ್ದೇಶದಿಂದ ಗುರುನಾಥ ಭೀಮಳ್ಳಿ ಅವರು ಈ ಕೃತಿಯನ್ನು ರಚಿಸಿರುವುದು ಶ್ಲಾಘನೀಯ. ನಿವೃತ್ತಿಯ ನಂತರವೂ ಸತ್ಸಂಗ, ಸಮಾಜಸೇವೆ ಹಾಗೂ ಸಾಹಿತ್ಯ ಚಟುವಟಿಕೆಗಳ ಮೂಲಕ ಸಕ್ರಿಯರಾಗಿರುವ ಅವರು ಹಿರಿಯ ನಾಗರಿಕರಿಗೆ ಮಾದರಿಯಾಗಿದ್ದಾರೆ ಎಂದು ಹೇಳಿದರು.



ಆಧ್ಯಾತ್ಮಿಕ ಚಿಂತಕರಾದ ಬಿ. ಮಹೇಶ್ವರಿಜೀ ಕೃತಿಯನ್ನು ಪರಿಚಯಿಸಿ, ಅಂತರ್ಜ್ಯೋತಿ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಚಿಂತನೆಗಳ ಅಮೂಲ್ಯ ಸಂಕಲನವಾಗಿದೆ. ಮಾನವ ಜೀವನವನ್ನು ಮೌಲ್ಯಯುತವಾಗಿ ರೂಪಿಸಿಕೊಳ್ಳಲು ಅಗತ್ಯವಾದ ವಿಚಾರಗಳನ್ನು ಲೇಖಕರು ಸರಳ ಹಾಗೂ ಪರಿಣಾಮಕಾರಿ ಭಾಷೆಯಲ್ಲಿ ನಿರೂಪಿಸಿದ್ದು, ಆಧ್ಯಾತ್ಮಿಕ ಆಸಕ್ತಿ ಹೊಂದಿರುವ ಪ್ರತಿಯೊಬ್ಬರೂ ಓದಲೇಬೇಕಾದ ಕೃತಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಮೈಂದರ್ಗಿ ಹಿರೇಮಠದ ಶ್ರೀ ಷ.ಬ್ರ. ಅಭಿನವ ರೇವಣಸಿದ್ದ ಪಟ್ಟದೇವರು ಆಶೀರ್ವಚನ ನೀಡಿ, ''ಸೇವೆ ಸ್ವರ್ಗದ ಸೋಪಾನ'' ಎಂಬ ತತ್ವವನ್ನು ಬದುಕಿನಲ್ಲಿ ಅಳವಡಿಸಿಕೊಂಡಿರುವ ಗುರುನಾಥ ಭೀಮಳ್ಳಿ ಅವರು ಶಿಕ್ಷಣ ಸಹಾಯ, ಗ್ರಂಥಾಲಯಗಳ ಸ್ಥಾಪನೆ, ಧಾರ್ಮಿಕ ಹಾಗೂ ಸಾಮಾಜಿಕ ಸೇವೆಯೊಂದಿಗೆ ಸತ್ಸಂಗದ ಮೂಲಕ ಸಮಾಜಕ್ಕೆ ಮಾರ್ಗದರ್ಶನ ನೀಡುತ್ತಿದ್ದಾರೆ. ಅವರ ಈ ಕೃತಿ ಆಧ್ಯಾತ್ಮಿಕ ಸಾಧಕರಿಗೆ ದಾರಿದೀಪವಾಗಲಿದೆ ಎಂದು ಹೇಳಿದರು.

ಲೇಖಕ ಗುರುನಾಥ ಭೀಮಳ್ಳಿ ಮಾತನಾಡಿ, ಶ್ರೀ ಸಿದ್ದಾರೂಢರ ಪ್ರೇರಣೆಯಿಂದ ನಡೆಸಿದ ಸತ್ಸಂಗಗಳ ಅನುಭವಗಳು ಮತ್ತು ಆಧ್ಯಾತ್ಮಿಕ ಚಿಂತನೆಗಳೇ ಅಂತರ್ಜ್ಯೋತಿ ಕೃತಿಯ ರೂಪ ಪಡೆದಿವೆ ಎಂದರು. ಕೃತಿ ಪ್ರಕಟಣೆಗೆ ಸಹಕರಿಸಿದ ಶರತ್‌ಚಂದ್ರ ಪೊಲೀಸ್ ಪಾಟೀಲ, ಸಾಹಿತ್ಯ ಪರಿಷ್ಕರಣೆಗೆ ನೆರವಾದ ಡಾ. ಕಾವ್ಯಶ್ರೀ ಮಹಾಗಾಂವಕರ್ ಡಾ. ಶರಣಬಸಪ್ಪ ವಡ್ಡನಕೇರಿ ಹಾಗೂ ಸತ್ಸಂಗದ ಗೆಳೆಯರಿಗೆ ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಕೆಕೆಆರ್‌ಡಿಬಿ ಅಧೀನ ಕಾರ್ಯದರ್ಶಿ ಶಿವಪುತ್ರಪ್ಪ ಕಂಠಿ, ಶ್ರವಣಕುಮಾರ ಮುನ್ನೊಳ್ಳಿ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು. ನಿರ್ಮಲಾ ಸಿರಗಾಪೂರ ಸ್ವಾಗತಿಸಿದರು. ಕಾಶೀನಾಥ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿ ಕಾರ್ಯಕ್ರಮ ನಿರೂಪಿಸಿದರು. ವಿನೋದಕುಮಾರ ಜನೇವರಿ ವಂದಿಸಿದರು.

ಕಾರ್ಯಕ್ರಮದಲ್ಲಿ ರೇವಣಸಿದ್ದಪ್ಪ ಜೀವಣಗಿ, ಗಣೇಶ ಚಿನ್ನಾಕರ್, ನಾಗೇಂದ್ರಪ್ಪ ಬಂಟನಳ್ಳಿ, ಸಂಗಪ್ಪ ಭೀಮಳ್ಳಿ, ಗುರುನಾಥ ವಿಶ್ವಪ್ಪ, ಶರಣಬಸಪ್ಪ ಭೀಮಳ್ಳಿ, ಮಲ್ಲಿಕಾರ್ಜುನ ಆಳಂದ, ಚಂದ್ರಶೇಖರ ಭೀಮಳ್ಳಿ, ಚಂದ್ರಮೋಹನ ಭೀಮಳ್ಳಿ, ವಿಜಯಕುಮಾರ ಭಾಲ್ಕಿ, ಶಿವಶರಣ ಭೀಮಳ್ಳಿ, ಶ್ರೀಮತಿ ಮಲ್ಲಮ್ಮ, ಶ್ರೀಮತಿ ರೇಣುಕಾದೇವಿ ಸೇರಿದಂತೆ ಸಿದ್ದರೂಢ ಸತ್ಸಂಗ ಸಮಿತಿಯ ಸದಸ್ಯರು ಹಾಗೂ ಭಕ್ತರು ಭಾಗವಹಿಸಿದ್ದರು.

556 ನೇ ಉರ್ಸ್ ಮುಬಾರಕ್ ಹಜರತ್ ಸೈಯದ್ ಶಾಮ್ಸ್ ಆಲಂ ಹುಸೇನಿ ದರ್ಗಾ ಕುತ್ಬೆ ರಾಯಚೂರು

ರಜಾ ಹುಸೇನಿ ಅವರನ್ನು ರಾಯಚೂರಿನ ದರ್ಗಾ ಹಜರತ್ ಸೈಯದ್ ಶಾ ಶಮ್ಸ್ ಅಲಂ ಹುಸೇನಿ (ಆರ್ಎ) ಕುತುಬ್ ಇ ರಾಯಚೂರಿನ ಹೊಸ ಸಜ್ಜಾದ ನಶೀನ್/ಮುತವ್ವಾಲಿಯಾಗಿ ನೇಮಿಸಿದೆ, ಅವರ ತಂದೆ ಸೈಯದ್ ಶಾ ಅಶ್ರಫ್ ರಜಾ ಹುಸೇನಿ ಕರ್ನಾಟಕದ ರಾಯಚೂರಿನ ದರ್ಗಾ ಹಜರತ್ ಸೈಯದ್ ಶಾ ಶಮ್ಸ್ ಅಲಂ ಹುಸೇನಿ (ಆರ್ಎ) ಕುತುಬ್ ಇ ರಾಯಚೂರಿನ 17 ನೇ ಸಜ್ಜಾದ ನಶೀನ್/ಮುತವ್ವಾಲಿಯಾಗಿ ಉತ್ತಮ ಸೇವೆ ಸಲ್ಲಿಸಿದ ನಂತರ.

ಇಂದು ನಾವು ಕುತುಬೆ ರಾಯಚೂರಿನ ಹಜರತ್ ಸೈಯದ್ ಶಾ ಶಮ್ಸ್-ಎ-ಅಲಂ ಹುಸೇನಿ (ಆರ್.ಎ.) ಅವರ ಪವಿತ್ರ ದೇಗುಲದಲ್ಲಿದ್ದೇವೆ. ಈ ಆಧ್ಯಾತ್ಮಿಕ ಸ್ಥಳಕ್ಕೆ ಭೇಟಿ ನೀಡೋಣ ಮತ್ತು ಸಮೃದ್ಧ ಭವಿಷ್ಯಕ್ಕಾಗಿ ಸರ್ವಶಕ್ತನ ಆಶೀರ್ವಾದವನ್ನು ಪಡೆಯೋಣ.

ಆರಂಭಿಕ ಜೀವನ ಮತ್ತು ಕುಟುಂಬದ ಹಿನ್ನೆಲೆ: ಹಜರತ್ ಸೈಯದ್ ಶಾ ಶಮ್ಸ್ ಅಲಂ ಹುಸೇನಿ ಅವರು ಹಜರತ್ ಸೈಯದ್ ಶಾ ಚಂದಾ ಹುಸೇನಿ ಅವರ ಅಡಿಯಲ್ಲಿ ಆಧ್ಯಾತ್ಮಿಕವಾಗಿ ಪೋಷಿಸಿದ ಉದಾತ್ತ ಸಾದತ್ ವಂಶದಲ್ಲಿ ಜನಿಸಿದರು. ಹಜರತ್ ಸೈಯದ್ ಶಾ ಶಮ್ಸ್ ಅಲಂ ಹುಸೇನಿ ಡೆಕ್ಕನ್‌ನ ಯುವ ಆದರೆ ಆಧ್ಯಾತ್ಮಿಕವಾಗಿ ಉಜ್ವಲ ಸಂತರಾಗಿದ್ದರು, ಅವರ ಸಂಕ್ಷಿಪ್ತ ಜೀವನವು ರಾಯಚೂರಿನಲ್ಲಿ ಶಾಶ್ವತವಾದ ಗುರುತು ಬಿಟ್ಟಿತ್ತು. ಅವರ ಮೂಲ ಹೆಸರು ಹಜರತ್ ಸೈಯದ್ ಅಹ್ಮದ್, ಆದರೆ ಅವರು ಹಜರತ್ ಸೈಯದ್ ಶಾ ಶಮ್ಸ್ ಅಲಂ ಹುಸೇನಿ ಎಂದು ವ್ಯಾಪಕವಾಗಿ ಪ್ರಸಿದ್ಧರಾದರು - ಶಮ್ಸ್ ಅಲಂ, ಜಗತ್ತಿನ ಸೂರ್ಯ, ನಂತರ ಜನರು ಅವರಲ್ಲಿ ಕಂಡ ಆಧ್ಯಾತ್ಮಿಕ ತೇಜಸ್ಸನ್ನು ಪ್ರತಿಬಿಂಬಿಸುವ ಬಿರುದು. ಅವರು ಹಜರತ್ ಸೈಯದ್ನಾ ಇಮಾಮ್ ಹುಸೇನ್‌ರ ವಂಶಾವಳಿಯನ್ನು ಗುರುತಿಸುವ ಉದಾತ್ತ ಸಾದತ್ ಕುಟುಂಬಕ್ಕೆ ಸೇರಿದವರು, ಅವರ ಗೌರವಾನ್ವಿತ ತಂದೆ, ಹಜರತ್ ಸೈಯದ್ ಶಾ ಚಂದಾ ಹುಸೇನಿ ಎಂದೂ ಕರೆಯಲ್ಪಡುವ ಹಜರತ್ ಸೈಯದ್ ಜಲಾಲುದ್ದೀನ್, ಸ್ವತಃ ಡೆಕ್ಕನ್‌ನ ಗೌರವಾನ್ವಿತ ಸೂಫಿಯಾಗಿದ್ದರು. ಮೂಲತಃ ಉತ್ತರ ಭಾರತದಿಂದ ಬಂದ ಅವರು, ಬಿಜಾಪುರದ ಸುಲ್ತಾನ್ ಯೂಸುಫ್ ಆದಿಲ್ ಷಾ ಆಳ್ವಿಕೆಯಲ್ಲಿ ದಕ್ಷಿಣಕ್ಕೆ ವಲಸೆ ಬಂದು ಗೋಗಿ ಗ್ರಾಮದಲ್ಲಿ ನೆಲೆಸಿದರು. ಆ ಸಮಯದಲ್ಲಿ, ಗೋಗಿ ಸುಲ್ತಾನ್ ಇಬ್ರಾಹಿಂ ಆದಿಲ್ ಷಾ ಅವರಿಂದ ನಿಧಿಸಂಗ್ರಹಿಸಲ್ಪಟ್ಟ ಸಾರ್ವಜನಿಕ ಅಡುಗೆಮನೆಯಿಂದ ಬೆಂಬಲಿತವಾದ ಧರ್ಮನಿಷ್ಠ ಜನರಿಗೆ ಸಭೆ ಸೇರುವ ಸ್ಥಳವಾಗಿತ್ತು.

ಹಜರತ್ ಸೈಯದ್ ಶಾ ಚಂದಾ ಹುಸೇನಿ ಅಲ್ಲಿ ತಮ್ಮ ಜೀವನವನ್ನು ಬೋಧನೆ, ಅನ್ವೇಷಕರಿಗೆ ಮಾರ್ಗದರ್ಶನ ಮತ್ತು ಸಮುದಾಯಕ್ಕೆ ಸೇವೆ ಸಲ್ಲಿಸಲು ಮೀಸಲಿಟ್ಟರು, ಆದರೆ ಸುಲ್ತಾನನ ಬೆಂಬಲವು ಅವರನ್ನು ಲೌಕಿಕ ಕಾಳಜಿಗಳಿಂದ ಮುಕ್ತಗೊಳಿಸಿತು. ಅವನ ತಂದೆ, ಅವನೊಳಗಿನ ಶಕ್ತಿಯುತ ಜಲಾಳನ್ನು ಗ್ರಹಿಸಿ, ತನ್ನ ಮಗನು ಸ್ವತಂತ್ರ ಆಧ್ಯಾತ್ಮಿಕ ಧ್ಯೇಯಕ್ಕೆ ಗುರಿಯಾಗಿದ್ದಾನೆಂದು ಅರಿತುಕೊಂಡನು ಮತ್ತು ವಿಸ್ಮಯದಿಂದ, ಮನೆಯಿಂದ ಹೊರಟು ಅಲ್ಲಾಹನ ಮಾರ್ಗದಲ್ಲಿ ಸೇವೆ ಸಲ್ಲಿಸಲು ಅವನಿಗೆ ಅನುಮತಿ ನೀಡಿದನು. ಮನೆಯಿಂದ ಹೊರಡುವ ಮೊದಲು, ಅವನು ತನ್ನ ತಂದೆಯಿಂದ ಅಂತಿಮ ಮಾರ್ಗದರ್ಶನವನ್ನು ಪಡೆದನು, ಅವನ ತಂದೆ ಅವನಿಗೆ ಆಧ್ಯಾತ್ಮಿಕ ಸೂಚನೆಗಳನ್ನು ನೀಡಿದನು, ಅವನಿಗೆ ಖಿಲಾಫತ್ ನೀಡಿದನು ಮತ್ತು ಅವನಿಂದ ಬಾಯಾತ್ ಪಡೆದು ದೈವಿಕ ಚಿಹ್ನೆಯ ನಂತರ ರಾಯಚೂರಿನಲ್ಲಿ ನೆಲೆಸಿದನು, ಮಾರ್ಗದರ್ಶನ ಮತ್ತು ಸೇವೆಗೆ ಜೀವನವನ್ನು ಮುಡಿಪಾಗಿಟ್ಟನು.

ಮಳೆಗಾಲದಲ್ಲಿ, ಪ್ರಯಾಣ ಮಾಡುವಾಗ, ಭೀಕರ ಬಿರುಗಾಳಿಯ ನಡುವೆ ರಾತ್ರಿಯಲ್ಲಿ ಕೃಷ್ಣಾ ನದಿಯನ್ನು ತಲುಪಿದನು, ದಾಟಲು ಯಾವುದೇ ಮಾರ್ಗವಿಲ್ಲ. ಅವನು ಅಲ್ಲಾಹು ಅರ್ಕ್ಬ ಎಂದು ಪಠಿಸಿದನು ಮತ್ತು ದೈವಿಕ ಅನುಗ್ರಹದಿಂದ ನದಿಯ ಹರಿವು ಅವನಿಗೆ ಸುರಕ್ಷಿತವಾಗಿ ದಾಟಲು ಸಾಕಷ್ಟು ಸಮಯ ನಿಂತಿತು.

ಕೊನೆಗೆ, ಅವನು ರಾಯಚೂರಿಗೆ ಬಂದನು. ತನ್ನ ತಂದೆಯ ಸೂಚನೆಯನ್ನು ಅನುಸರಿಸಿ, ಅವನು ಸೇಂದಿ ಹಣ್ಣನ್ನು ಹೂತು ಅಲ್ಲಿ ಶುದ್ಧೀಕರಣ ಮಾಡಿದನು. ಕೆಲವು ದಿನಗಳ ನಂತರ, ಆ ಸ್ಥಳದಿಂದ ಹಸಿರು ಕೊಂಬೆಗಳು ಮೊಳಕೆಯೊಡೆಯುವುದನ್ನು ಅವನು ನೋಡಿದನು. ಇದನ್ನು ಉದ್ದೇಶಿತ ಸಂಕೇತವೆಂದು ಪರಿಗಣಿಸಿ, ಅವನು ಅಲ್ಲಿ ನೆಲೆಸಿದನು.

ಕೊನೆಯ ದಿನಗಳು: ಹಜರತ್ ಸೈಯದ್ ಶಾ ಶಮ್ಸ್ ಆಲಂ ಹುಸೇನಿ 15 ಸಫರ್ 892 ಹಿಜ್ರಿ ರಂದು ನಿಧನರಾದರು. ತಾರಿಕ್ ಔಲಿಯಾ ರಾಯಚೂರ್ ಅವರ ಪ್ರಕಾರ, ಅವರು ಸಾಯುವಾಗ ಕೇವಲ ಹದಿನೆಂಟು ವರ್ಷ ವಯಸ್ಸಿನವರಾಗಿದ್ದರು, ಡೆಕ್ಕನ್‌ನಲ್ಲಿ ಆಳವಾದ ಆಧ್ಯಾತ್ಮಿಕ ಗುರುತು ಮಾಡಿದ ಅಲ್ಪ ಜೀವನವನ್ನು ತೊರೆದರು. ಅವರ ಆಧ್ಯಾತ್ಮಿಕ ವಂಶವನ್ನು (ಸಿಲ್ಸಿ ಲಾ) ಹಿರಿಯ ಚಿಶ್ತಿ ಸಂತರ ಮೂಲಕ ಗುರುತಿಸಲಾಗಿದೆ: ಹಜರತ್ ಖ್ವಾಜಾ ಮೊಯಿನುದ್ದೀನ್ ಹಸನ್ ಚಿಶ್ತಿ, ಹಜರತ್ ಖ್ವಾಜಾ ಕುತುಬುದ್ದೀನ್ ಭಕ್ತಿಯಾರ್ ಕಾಕಿ, ಹಜರತ್ ಖ್ವಾಜಾ ಫರಿದುದ್ದೀನ್ ಗಂಜ್ ಶರ್ಕ್, ಹಜರತ್ ಖ್ವಾಜಾ ನಿಜಾಮುದ್ದೀನ್ ಅಹಿಯಾ, ಹರ್ಝುತ್ ಖ್ವಾಜಾ ನಿಜಾಮುದ್ದೀನ್ ಔಲಿಯಾ, ಹಜ್ರತ್‌ದಿನ್ ಅಹಿಚೌದಿ ಝುಹೆದಿನ್ ಅಲಾವುದ್ದೀನ್ ಹಕ್, ಹಜರತ್ ಖ್ವಾಜಾ ಅಶ್ರಫ್ ಜಹಾಂಗೀರ್ ಹಾಜಿ ಸಮಸ್ತಾನಿ, ಹಜರತ್ ಅಸಾದುದ್ದೀನ್ ಝುಂಜನಿ, ಹಜರತ್ ಖ್ವಾಜಾ ಆರಿಫ್ ಬಿಲ್ಲಾ ಬಿನ್ ಜಿಯಾವುದ್ದೀನ್, ಹಜರತ್ ಸೈಯದ್ ಜಲಾಲುದ್ದೀನ್ (ಸೈಯದ್ ಶಾ ಚಂದಾ ಹುಸೇನಿ) ಮತ್ತು ಅಂತಿಮವಾಗಿ ಹಜರತ್ ಎ ಸೈಯದ್ ಶಾಹ್ಸಾ ಶಾಮ್ಸ ಶಾಮಸ್.

ಹಜರತ್ ಸೈಯದ್ ಷಾ ಶಮ್ಸ್ ಆಲಂ ಹುಸೇನಿ ರಾಯಚೂರು ರಾಯಚೂರಿನ ಅತ್ಯಂತ ಧಾರ್ಮಿಕ ವ್ಯಕ್ತಿ ಮತ್ತು ಈ ನಗರದಲ್ಲಿ ವಿಶ್ರಾಂತಿ ಪಡೆಯುತ್ತಾರೆ. ಪ್ರತಿ ವರ್ಷ 15 ನೇ ಸಫರ್ ದಿನದಂದು ಅವರ ಉರುಸ್ ಆಚರಿಸಲಾಗುತ್ತದೆ, ಆ ಸಮಯದಲ್ಲಿ ಸಮಾಧಿಯನ್ನು ಬೆಳಗಿಸಲಾಗುತ್ತದೆ ಮತ್ತು ಜಾತಿ, ಧರ್ಮ ಮತ್ತು ಧರ್ಮವನ್ನು ಮೀರಿ ಅಪಾರ ಸಂಖ್ಯೆಯ ಭಕ್ತರು ಸೇರುತ್ತಾರೆ. ಜನರು ದೂರದ ಸ್ಥಳಗಳಿಂದ ಪ್ರಾರ್ಥನೆ ಸಲ್ಲಿಸಲು, ಆಶೀರ್ವಾದ ಪಡೆಯಲು ಮತ್ತು ಅಲ್ಲಾಹನಿಗೆ ಸಮರ್ಪಿತವಾದ ಜೀವನವನ್ನು ನೆನಪಿಸಿಕೊಳ್ಳಲು ಬರುತ್ತಾರೆ.ಹೈದರಾಬಾದ್ ನಿಜಾಮರ ಕಾಲದಲ್ಲಿ, ಹೂವುಗಳು ಮತ್ತು ಸುವಾಸನೆಯ ಔದ್ ಅನ್ನು ಅರ್ಪಿಸುವ ಮೂಲಕ ದೇವಾಲಯಕ್ಕೆ ಅಧಿಕೃತ ಗೌರವವನ್ನು ತೋರಿಸಲಾಗುತ್ತಿತ್ತು ಮತ್ತು ರಾಯಚೂರಿನಲ್ಲಿ ಉರುಸ್ ದಿನವನ್ನು ಸ್ಥಳೀಯ ರಜಾದಿನವಾಗಿ ಆಚರಿಸಲಾಗುತ್ತಿತ್ತು.

ಪೌರಕಾರ್ಮಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ; ಸುರಕ್ಷತಾ ಕವಚ ಬಳಕೆಗೆ ಪೌರಾಯುಕ್ತರ ಸಲಹೆ

ಇದರ ಸದುಪಯೋಗ ಪ್ರತಿಯೊಬ್ಬರು ಪಡೆದುಕೊಳ್ಳಬೇಕು ಎಂದರು.

ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ನಾನು ನಿಮ್ಮೊಂದಿಗಿರುತ್ತೇನೆ. ಪ್ರತಿಯೊಬ್ಬರೂ ಪ್ರಾಮಾಣಿಕವಾಗಿ ಕೆಲಸ ಮಾಡಿ ನಗರದ ಸೌಂದರ್ಯೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ಆರೋಗ್ಯ ಇಲಾಖೆಯಿಂದ ಯಶಸ್ವಿಯಾಗಿ ನೆರವೇರಿದ ಈ ಉಚಿತ ಶಿಬಿರದಲ್ಲಿ ನೂರಾರು ಪೌರಕಾರ್ಮಿಕರು ಭಾಗವಹಿಸಿ ತಮ್ಮ ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

ಈ ಸಂದರ್ಭದಲ್ಲಿ ಡಾ. ವಿನಿತಾ, ಆರೋಗ್ಯ ಸಿಬ್ಬಂದಿಗಳಾದ ಶ್ರೀಧರ್ಮ, ಶೇಖ್ ಮೊಯಿನುದ್ದೀನ್, ಪದ್ಮಾವತಿ,ಕಾಂಚನಾ, ಮಾಲಿಂಗಾ, ಬಸಪ್ಪ, ನಗರಸಭೆ ಸಿಬ್ಬಂದಿಗಳಾದ ಕಿರಿಯ ಆರೋಗ್ಯ ನಿರೀಕ್ಷಕರಾದ ಸಿದ್ದಾರ್ಥ, ಕಿರಿಯ ಆರೋಗ್ಯ ನಿರೀಕ್ಷಕರಾದ ಶರಣಮ್ಮ ಮಂಜುನಾಥ್ ಚವ್ಹಾಣ, ನಿರೀಕ್ಷಕರಾದ ಮಂಜುನಾಥ ಚವ್ಹಾಣ ಇದ್ದರು.



ನಶಾಮುಕ್ತ ಸಿಯುಕೆ ಕ್ಯಾಂಪಸ್ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಿ: ಪ್ರೊ.ಬಟ್ಟು ಸತ್ಯನಾರಾಯಣ

ಕಲಬುರಗಿ,ಆ.03-

ಮಾದಕವಸ್ತು ಸೇವನೆಯಿಂದ ಮುಕ್ತವಾದ ಆರೋಗ್ಯಕರ ಶೈಕ್ಷಣಿಕ ವಾತಾವರಣ ನಿರ್ಮಾಣ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ''ನಶಾಮುಕ್ತ ಸಿಯುಕೆ ಕ್ಯಾಂಪಸ್'' ನಿರ್ಮಾಣಕ್ಕೆ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ಒಗ್ಗಟ್ಟಿನಿಂದ ಕೈಜೋಡಿಸಬೇಕು ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಕರೆ ನೀಡಿದರು.

ವಿಶ್ವವಿದ್ಯಾಲಯದಲ್ಲಿ ''ನಶಾಮುಕ್ತ ಯುವವಿಕಸಿತ ಭಾರತ ಸಂಕಲ್ಪ ಜಾಗೃತಿ ಅಭಿಯಾನ'' ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ''ನಶಾಮುಕ್ತ ಯುವವಿಕಸಿತ ಭಾರತ ಸಂಕಲ್ಪ ಜಾಗೃತಿ ಅಭಿಯಾನ''ದ ಅಂಗವಾಗಿ ದೇಶದ ಯುವಜನತೆ, ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಹಾಗೂ ಶಿಕ್ಷಣ ಸಂಸ್ಥೆಗಳನ್ನು ಉದ್ದೇಶಿಸಿ ನೀಡಿದ ನೇರ ವರ್ಚುವಲ್ ಸಂದೇಶವನ್ನು ವಿಶ್ವವಿದ್ಯಾಲಯದ ಆಡಿಟೋರಿಯಂ1ರಲ್ಲಿ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಹಾಗೂ ಆಡಿಟೋರಿಯಂ2ರಲ್ಲಿ ಪ್ರಭಾರ ಕುಲಸಚಿವ ಪ್ರೊ. ವೆಂಕಟ ರಮಣ ದೊಡ್ಡಿ ಅವರ ಉಪಸ್ಥಿತಿಯಲ್ಲಿ ವೀಕ್ಷಿಸಲಾಯಿತು.

ಬಳಿಕ ಮಾತನಾಡಿದ ಕುಲಪತಿ, ಯುವಜನರಲ್ಲಿ ಮಾದಕವಸ್ತು ಸೇವನೆಯು ಶಿಕ್ಷಣ ಕ್ಷೇತ್ರಕ್ಕೆ ಮಾತ್ರವಲ್ಲದೆ ರಾಷ್ಟ್ರದ ಸಾಮಾಜಿಕ, ದೈಹಿಕ ಹಾಗೂ ಆರ್ಥಿಕ ಅಭಿವೃದ್ಧಿಗೂ ಗಂಭೀರ ಸವಾಲಾಗಿ ಪರಿಣಮಿಸುತ್ತಿದೆ. ಈ ದುಷ್ಪ್ರವೃತ್ತಿಯನ್ನು ತಡೆಯುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದ್ದು, ಪ್ರಧಾನಮಂತ್ರಿಯವರ ಕರೆಯಂತೆ ಎಲ್ಲರೂ ಮಾದಕವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಸಂಕಲ್ಪ ಮಾಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದಲ್ಲಿ ''ನಶಾಮುಕ್ತ ಸಿಯುಕೆ ಕ್ಯಾಂಪಸ್'' ಪ್ರತಿಜ್ಞೆ ಸ್ವೀಕರಿಸಲಾಯಿತು. ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಜಾಗೃತಿ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮಾದಕವಸ್ತು ಮುಕ್ತ ಕ್ಯಾಂಪಸ್ ನಿರ್ಮಾಣಕ್ಕೆ ಕೈಜೋಡಿಸಬೇಕು. ಆರೋಗ್ಯಕರ ಸಮಾಜ ನಿರ್ಮಾಣದ ಮೂಲಕವೇ 2047ರ ವಿಕಸಿತ ಭಾರತದ ಕನಸನ್ನು ನನಸಾಗಿಸಲು ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ 12 ನಿಕಾಯಗಳ ಡೀನ್‌ಗಳು, 29 ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಸುಮಾರು 800ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ ಪ್ರಧಾನಮಂತ್ರಿಯವರ ವರ್ಚುವಲ್ ಸಂದೇಶವನ್ನು ವೀಕ್ಷಿಸಿದರು.

ರಾಯಚೂರಿನಲ್ಲಿ ಆಗಸ್ಟ್ 4ರಂದು ಅಂಡರ್ -19 ಬಾಲಕರ ಕ್ರಿಕೆಟ್ ಆಯ್ಕೆ

ರಾಯಚೂರು, ಆ.3: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (), ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ () ಸಂಯೋಜಿತವಾಗಿ 202627ನೇ ಸಾಲಿನ ಅಂಡರ್-19 ಬಾಲಕರ ರಾಜ್ಯ ಕ್ರಿಕೆಟ್ ತಂಡದ ಆಯ್ಕೆ ಟ್ರಯಲ್ಸ್ ಅನ್ನು ಆಗಸ್ಟ್ 4ರಂದು ರಾಯಚೂರಿನಲ್ಲಿ ಆಯೋಜಿಸಿದೆ. ರಾಜ್ಯದ ಪ್ರತಿಭಾವಂತ ಯುವ ಕ್ರಿಕೆಟಿಗರನ್ನು ಗುರುತಿಸಿ ರಾಜ್ಯ ತಂಡಕ್ಕೆ ಆಯ್ಕೆ ಮಾಡುವ ಉದ್ದೇಶದಿಂದ ಈ ಟ್ರಯಲ್ಸ್ ನಡೆಸಲಾಗುತ್ತಿದೆ.

ಆಯ್ಕೆ ಟ್ರಯಲ್ಸ್ ರಾಯಚೂರಿನ ಮೈದಾನ, ಮಂತ್ರಾಲಯಂ ರಸ್ತೆಯಲ್ಲಿ ಬೆಳಿಗ್ಗೆ 8 ಗಂಟೆಯಿಂದ ಆರಂಭವಾಗಲಿದೆ. ಜಿಲ್ಲೆಯಿಂದ ಅರ್ಹ ಆಟಗಾರರು ಕಡ್ಡಾಯವಾಗಿ ನಿಗದಿತ ಸಮಯಕ್ಕೆ ಹಾಜರಾಗಿ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಕಟಣೆಯ ಪ್ರಕಾರ, ಟ್ರಯಲ್ಸ್‌ನಲ್ಲಿ ಭಾಗವಹಿಸುವ ಆಟಗಾರರು ಅಂಡರ್-19 ವಯೋಮಿತಿಗೆ ಅರ್ಹರಾಗಿರಬೇಕು. ಜೊತೆಗೆ ಕರ್ನಾಟಕದ ಡೊಮಿಸೈಲ್ () ಹೊಂದಿರುವುದು ಕಡ್ಡಾಯವಾಗಿದೆ. ವಯೋಮಿತಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ ಮಾತ್ರ ಆಯ್ಕೆ ಪ್ರಕ್ರಿಯೆಗೆ ಅವಕಾಶ ನೀಡಲಾಗುತ್ತದೆ. ಆಯ್ಕೆ ಸಂದರ್ಭದಲ್ಲಿ ಆಟಗಾರರು ತಮ್ಮ ಮೂಲ ದಾಖಲೆಗಳೊಂದಿಗೆ ಹಾಜರಾಗಬೇಕು ಎಂದು ಸೂಚಿಸಲಾಗಿದೆ.

ಆಟಗಾರರು ಸಂಪೂರ್ಣ ಕ್ರಿಕೆಟ್ ಡ್ರೆಸ್ ಕೋಡ್ ಧರಿಸಿ ಬರಬೇಕು. ತಮ್ಮದೇ ಬ್ಯಾಟ್, ಪ್ಯಾಡ್, ಗ್ಲೌಸ್, ಹೆಲ್ಮೆಟ್ ಸೇರಿದಂತೆ ಅಗತ್ಯವಿರುವ ಎಲ್ಲಾ ಕ್ರಿಕೆಟ್ ಕಿಟ್‌ಗಳನ್ನು ಕಡ್ಡಾಯವಾಗಿ ತರಬೇಕಾಗಿದೆ. ಟ್ರಯಲ್ಸ್ ವೇಳೆ ಫಿಟ್ನೆಸ್, ಬ್ಯಾಟಿಂಗ್, ಬೌಲಿಂಗ್, ಫೀಲ್ಡಿಂಗ್ ಹಾಗೂ ಒಟ್ಟಾರೆ ಪ್ರದರ್ಶನದ ಆಧಾರದ ಮೇಲೆ ಪ್ರತಿಭಾವಂತ ಆಟಗಾರರನ್ನು ರಾಜ್ಯ ತಂಡಕ್ಕೆ ಆಯ್ಕೆ ಮಾಡಲಾಗುತ್ತದೆ.

ಪ್ರತಿ ಜಿಲ್ಲೆಯಿಂದ 13+2 ಆಟಗಾರರನ್ನು ಟ್ರಯಲ್ಸ್‌ಗೆ ಕಳುಹಿಸಲು ಅವಕಾಶ ಕಲ್ಪಿಸಲಾಗಿದೆ. ಜಿಲ್ಲೆಯ ಕ್ರಿಕೆಟ್ ಸಂಘಗಳು ಆಯ್ಕೆ ಮಾಡಿದ ಆಟಗಾರರು ನಿಗದಿತ ಸ್ಥಳದಲ್ಲಿ ವರದಿ ಮಾಡಬೇಕಿದ್ದು, ಎಲ್ಲ ಅರ್ಹತಾ ನಿಯಮಗಳನ್ನು ಪಾಲಿಸುವಂತೆ ಸೂಚಿಸಲಾಗಿದೆ.

ನಿಮ್ಮೂರು ಸುದ್ದಿ

ಸಂಪಾದಕೀಯ



ಇರ್ಫಾನ್ ಯೂಟ್ಯೂಬ್ ಚಾನೆಲ್ ನಿಷೇಧ: ದೇಶದ ಪ್ರಜಾಪ್ರಭುತ್ವದ ಕತ್ತು ಹಿಸುಕಿದ ಮೋದಿ ಸರ್ಕಾರ

ಕಳೆದ 12 ವರ್ಷಗಳ ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸಿದರೆ, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಮೋದಿ ಸರ್ಕಾರವು ಅಘೋಷಿತ ತುರ್ತುಪರಿಸ್ಥಿತಿಯನ್ನು ಹೇರಿದೆ. ರಾಷ್ಟ್ರೀಯ ಭದ್ರತೆ ಎಂಬ ಪದವು ಕೇವಲ ವಿರೋಧಿಗಳನ್ನು ಮಟ್ಟಹಾಕುವ ಅಸ್ತ್ರವಾಗಿ ಕುಗ್ಗಿದೆ. ಯೂಟ್ಯೂಬ್ ಚಾನೆಲ್‌ಗಳ ಮೇಲಿನ ಸರಣಿ ನಿರ್ಬಂಧಗಳು ಕೇವಲ ಮಾಧ್ಯಮದ ಸ್ವತಂತ್ರ ಧ್ವನಿ ಅಡಗಿಸುವ ಯತ್ನವಲ್ಲ, ಇದು 140 ಕೋಟಿ ಭಾರತೀಯ ಜನಸಾಮಾನ್ಯರಿಗೆ ಸತ್ಯ ತಿಳಿಯದಂತೆ ಮಾಡುವ ಸರ್ವಾಧಿಕಾರಿ ನಡೆಯಾಗಿದೆ.

'ದೆಹಲಿಯ ಜಂತರ್ ಮಂತರ್ ಪ್ರತಿಭಟನೆಗಳ ಮೂಲಕ ಇತ್ತೀಚೆಗೆ ಗಮನ ಸೆಳೆದಿದ್ದ ಕೊಳೆಗೇರಿ ನಿವಾಸಿ ಮಹಮ್ಮದ್ ಇರ್ಫಾನ್ ಅವರ ಯೂಟ್ಯೂಬ್ ಚಾನೆಲ್ ಹಠಾತ್ತನೆ ರದ್ದಾದದ್ದು ದೇಶಾದ್ಯಂತ ದೊಡ್ಡ ಚರ್ಚೆಗೆ ನಾಂದಿ ಹಾಡಿದೆ. ತಮ್ಮ ತೀಕ್ಷ್ಣ ಮಾತುಗಳು ಹಾಗೂ ಸರಳ ವಿಶ್ಲೇಷಣೆಯಿಂದ ಜನಸಾಮಾನ್ಯರ ಧ್ವನಿಯಾಗಿ ಹೊರಹೊಮ್ಮಿದ್ದ ಇರ್ಫಾನ್, ಚಾನೆಲ್ ಆರಂಭಿಸಿದ ಕೇವಲ 24 ಗಂಟೆಗಳಲ್ಲಿ ಬರೋಬ್ಬರಿ 70,000 ಕ್ಕೂ ಹೆಚ್ಚು ಚಂದಾದಾರರನ್ನು ಗಳಿಸಿ ಜನಪ್ರಿಯತೆ ಕಂಡಿದ್ದರು. ಈ ಅನಿರೀಕ್ಷಿತ ಯಶಸ್ಸಿನ ಬೆನ್ನಲ್ಲೇ ದಿಢೀರನೆ ಅವರ ಖಾತೆಯನ್ನು ರದ್ದುಗೊಳಿಸಲಾಯಿತು. ಇದು ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿ ಸರ್ಕಾರದ ವಿರುದ್ಧದ ಆರೋಪಗಳಿಗೆ ಪುಷ್ಟಿ ನೀಡಿತು.

ಯೂಟ್ಯೂಬ್ ಸಂಸ್ಥೆಯು ತನ್ನ ಸೇವಾ ನಿಯಮಗಳ ಉಲ್ಲಂಘನೆಯ ಕಾರಣ ಸ್ಪಷ್ಟವಾಗಿ ನೀಡಿತ್ತು. ಆದಾಗ್ಯೂ, ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಜನಾಕ್ರೋಶ ವ್ಯಕ್ತವಾದ ನಂತರ ಈ ಚಾನೆಲ್ ಅನ್ನು ತ್ವರಿತವಾಗಿ ಮರುಸ್ಥಾಪನೆ ಮಾಡಲಾಯಿತು. ಆದರೆ, ಸರ್ಕಾರದ ಕಟು ವಿಮರ್ಶಕರಾಗಿದ್ದ ಕಾರಣಕ್ಕಾಗಿಯೇ ರಾಜಕೀಯ ಒತ್ತಡದಿಂದ ಈ ಕ್ಷಿಪ್ರ ಕಾರ್ಯಾಚರಣೆ ನಡೆದಿತ್ತು ಎಂಬ ಶಂಕೆಗಳು ದಟ್ಟವಾಗಿವೆ. ಈ ಘಟನೆಯು ದೇಶದಲ್ಲಿ ಬೆಳೆಯುತ್ತಿರುವ ಡಿಜಿಟಲ್ ಪರ್ಯಾಯ ಮಾಧ್ಯಮಗಳ ಮತ್ತು ಸ್ವತಂತ್ರ ಧ್ವನಿಗಳ ಕತ್ತು ಹಿಸುಕುವ ನಿರಂತರ ಪ್ರಕ್ರಿಯೆಯ ಭಾಗ ಎಂದು ಅನೇಕ ಸಾಮಾಜಿಕ ಕಾರ್ಯಕರ್ತರು ಕಳವಳ ವ್ಯಕ್ತಪಡಿಸಿದ್ದಾರೆ.

ಇರ್ಫಾನ್ ಅವರ ಈ ಪ್ರಕರಣವನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ. ಕಳೆದ 12 ವರ್ಷಗಳ ಅವಧಿಯಲ್ಲಿ, ಭಾರತದಲ್ಲಿ ಮುಖ್ಯವಾಹಿನಿ ಮಾಧ್ಯಮಗಳ ವಿಶ್ವಾಸಾರ್ಹತೆ ಕುಸಿದಾಗ, ಪರ್ಯಾಯ ಡಿಜಿಟಲ್ ವೇದಿಕೆಗಳು ಜನಸಾಮಾನ್ಯರ ಪ್ರಮುಖ ಆಧಾರವಾದವು. ಸತ್ಯಾಸತ್ಯತೆಗಳನ್ನು ಬಯಲಿಗೆಳೆಯುವ ಇಂತಹ ವೇದಿಕೆಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಹೊಸ ಐಟಿ ನಿಯಮಗಳನ್ನು 2021ರಲ್ಲಿ ಜಾರಿಗೆ ತಂದಿತು. ಈ ನಿಯಮಗಳ ಅಡಿಯಲ್ಲಿ ಸಿಗುವ ತುರ್ತು ಅಧಿಕಾರವನ್ನು ಬಳಸಿಕೊಂಡು ಯಾವುದೇ ಪೂರ್ವ ಸೂಚನೆ ಇಲ್ಲದೆ ಏಕಾಏಕಿ ನೂರಾರು ಸ್ವತಂತ್ರ ಯೂಟ್ಯೂಬ್ ಚಾನೆಲ್‌ಗಳನ್ನು ನಿರ್ಬಂಧಿಸುವ ಕಠಿಣ ಕ್ರಮಗಳಿಗೆ ಸರ್ಕಾರವು ನಿರಂತರವಾಗಿ ಮುಂದಾಗುತ್ತಲೇ ಬಂದಿದೆ.

2021 ಮತ್ತು 2022 ರ ಅವಧಿಯಲ್ಲಿ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಸಾಮೂಹಿಕವಾಗಿ ಅನೇಕ ಚಾನೆಲ್‌ಗಳನ್ನು ರದ್ದುಗೊಳಿಸಿತು. ರಾಷ್ಟ್ರೀಯ ಭದ್ರತೆ, ಸಾರ್ವಜನಿಕ ಸುವ್ಯವಸ್ಥೆ ಮತ್ತು ತಪ್ಪು ಮಾಹಿತಿ ಹರಡುವಿಕೆ ಎಂಬ ಒಂದೇ ತೆರನಾದ ಕಾರಣಗಳನ್ನು ನೀಡಿ ಒಂದೇ ಬಾರಿಗೆ 22 ಚಾನೆಲ್‌ಗಳನ್ನು ನಿರ್ಬಂಧಿಸಲಾಯಿತು. ಬಳಿಕ 16 ಹಾಗೂ 8 ಚಾನೆಲ್‌ಗಳ ಮೇಲೆ ನಿಷೇಧ ಹೇರಲಾಯಿತು. ಕೆಲವು ವಿದೇಶಿ ಮೂಲದ ಚಾನೆಲ್‌ಗಳಿದ್ದರೂ, ಸರ್ಕಾರವನ್ನು ಪ್ರಶ್ನಿಸುವ ಭಾರತೀಯ ಪತ್ರಕರ್ತರ ವೇದಿಕೆಗಳನ್ನು ಸಹ ಇದೇ ನೆಪದಲ್ಲಿ ನಿರ್ಬಂಧಿಸಲಾಗಿದೆ ಎಂದು ಮಾನವ ಹಕ್ಕುಗಳ ಹೋರಾಟಗಾರರ ಸಂಘಟನೆಗಳು ಆರೋಪಿಸಿವೆ.

ದೇಶೀಯ ಸಣ್ಣ ವೇದಿಕೆಗಳಷ್ಟೇ ಅಲ್ಲದೆ, ಅಂತಾರಾಷ್ಟ್ರೀಯ ಮಟ್ಟದ ವಸ್ತುನಿಷ್ಠ ವಿಮರ್ಶೆಗಳನ್ನೂ ಸರ್ಕಾರ ತೀವ್ರ ಅಸಹಿಷ್ಣುತೆಯಿಂದ ಎದುರಿಸಿದ ಉದಾಹರಣೆಗಳಿವೆ. 2023 ರಲ್ಲಿ ಬಿಬಿಸಿ ಸಂಸ್ಥೆಯು ಪ್ರಸಾರ ಮಾಡಿದ : ಸಾಕ್ಷ್ಯಚಿತ್ರವು ಇದಕ್ಕೆ ಸಾಕ್ಷಿಯಾಗಿದೆ. 2002 ರ ಗುಜರಾತ್ ಗಲಭೆ ಕುರಿತ ಈ ವಿಶ್ಲೇಷಣೆಯನ್ನು ಪಕ್ಷಪಾತಿ ಪ್ರಚಾರ ಎಂದು ಜರಿದ ಸರ್ಕಾರ, ಭಾರತದೊಳಗೆ ಅದರ ಎಲ್ಲಾ ಯೂಟ್ಯೂಬ್ ಮತ್ತು ಟ್ವಿಟರ್ ಲಿಂಕ್‌ಗಳನ್ನು ಬ್ಲಾಕ್ ಮಾಡಿತು. ಈ ಕಠಿಣ ನಡೆಯು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಸರ್ವಾಧಿಕಾರಿ ಧೋರಣೆ ಎಂದು ವಿಮರ್ಶೆಗೆ ಗುರಿಯಾಯಿತು.

ಕಾಶ್ಮೀರದ ನೈಜ ಪರಿಸ್ಥಿತಿಯನ್ನು ಜಗತ್ತಿಗೆ ಪರಿಚಯಿಸುತ್ತಿದ್ದ ಪ್ರಮುಖ ಸ್ವತಂತ್ರ ಡಿಜಿಟಲ್ ನ್ಯೂಸ್ ಪೋರ್ಟಲ್ ಆದ ದಿ ಕಾಶ್ಮೀರ್ ವಾಲಾ ( ) ಸರ್ಕಾರದ ದಮನ ನೀತಿಗೆ ಬಲಿಯಾದ ಮತ್ತೊಂದು ಸಂಸ್ಥೆಯಾಗಿದೆ. ಐಟಿ ಕಾಯ್ದೆಯ ಅಡಿಯಲ್ಲಿ ಈ ಸುದ್ದಿ ಸಂಸ್ಥೆಯ ವೆಬ್‌ಸೈಟ್, ಫೇಸ್‌ಬುಕ್, ಎಕ್ಸ್ ಮತ್ತು ಯೂಟ್ಯೂಬ್ ಖಾತೆಗಳನ್ನು ಅಳಿಸಿಹಾಕಲಾಯಿತು. ಅಲ್ಲಿನ ಸ್ಥಳೀಯ ವಾಸ್ತವವನ್ನು ಬಿಚ್ಚಿಡುವ ಇಂತಹ ಧ್ವನಿಗಳನ್ನು ರಾಷ್ಟ್ರವಿರೋಧಿ ಎಂದು ಬಿಂಬಿಸಲಾಯಿತು. ಅಷ್ಟೇ ಅಲ್ಲದೆ, ಸಂಪಾದಕರನ್ನು ಕಠಿಣ ಭಯೋತ್ಪಾದನಾ ನಿಗ್ರಹ ಕಾಯ್ದೆಯಡಿ ಬಂಧಿಸಿ ಜೈಲಿಗಟ್ಟಿದ್ದು ಪತ್ರಿಕಾ ಸ್ವಾತಂತ್ರ್ಯದ ಮೇಲಿನ ಅತ್ಯಂತ ಅಪಾಯಕಾರಿ ಆಕ್ರಮಣವಾಗಿದೆ.

ಉತ್ತರ ಪ್ರದೇಶ ಮೂಲದ ಖ್ಯಾತ ಪತ್ರಕರ್ತ ಸಂಜಯ್ ಶರ್ಮಾ ನಡೆಸುತ್ತಿದ್ದ 4 ಚಾನೆಲ್ ಪ್ರಕರಣವು ನ್ಯಾಯಾಲಯದ ಮಧ್ಯಪ್ರವೇಶಕ್ಕೆ ಕಾರಣವಾಯಿತು. ಸರ್ಕಾರದ ನೀತಿಗಳು ಮತ್ತು ಯುಪಿ ಸರ್ಕಾರದ ವೈಫಲ್ಯಗಳನ್ನು ತೀಕ್ಷ್ಣವಾಗಿ ವಿಶ್ಲೇಷಿಸುತ್ತಿದ್ದ ಈ ಜನಪ್ರಿಯ ಚಾನೆಲ್ ಅನ್ನು ಭಾರತ ವಿರೋಧಿ ಲಾಬಿ ಮತ್ತು ಪ್ರಚಾರ ಎಂಬ ಕಾರಣ ನೀಡಿ ನಿರ್ಬಂಧಿಸಲಾಗಿತ್ತು. ತರುವಾಯ ದೆಹಲಿ ಹೈಕೋರ್ಟ್ ಈ ಪ್ರಕರಣದಲ್ಲಿ ಮಧ್ಯಪ್ರವೇಶಿಸಿ, ಕೆಲವು ಷರತ್ತುಗಳೊಂದಿಗೆ ಚಾನೆಲ್ ಮರುಸ್ಥಾಪನೆಗೆ ಆದೇಶ ನೀಡಿತು. ನ್ಯಾಯಾಲಯದ ಈ ನಡೆಯು ಸರ್ಕಾರದ ಏಕಪಕ್ಷೀಯ ನಿರ್ಧಾರಗಳಿಗೆ ಕನ್ನಡಿ ಹಿಡಿದಂತಿದೆ.

2024 ರ ಸಾರ್ವತ್ರಿಕ ಚುನಾವಣೆಯ ಹೊಸ್ತಿಲಲ್ಲಿ ಸರ್ಕಾರದ ವಿರೋಧಿ ಧ್ವನಿಗಳನ್ನು ಹತ್ತಿಕ್ಕುವ ಯತ್ನಗಳು ತೀವ್ರಗೊಂಡವು. ದಲಿತರು, ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತರ ದನಿಯಾಗಿದ್ದ ಬೋಲ್ತಾ ಹಿಂದುಸ್ತಾನ್ ( ) ಯೂಟ್ಯೂಬ್ ಚಾನೆಲ್ ಅನ್ನು ಸಂಪೂರ್ಣ ತಡೆಹಿಡಿಯಲಾಯಿತು. ಅದೇ ರೀತಿಯಾಗಿ ಬಹುಜನರ ವರದಿಗಾರಿಕೆ ಮಾಡುತ್ತಿದ್ದ ಜನಪ್ರಿಯ ನ್ಯಾಷನಲ್ ದಸ್ತಕ್ ( ) ಚಾನೆಲ್‌ಗೆ ಕಾನೂನು ನೋಟಿಸ್ ನೀಡಲಾಯಿತು. ಚುನಾವಣೆ ಸಮಯದಲ್ಲಿ ಆಡಳಿತಾರೂಢ ವ್ಯವಸ್ಥೆಯ ವಿರುದ್ಧ ಅಲೆ ಸೃಷ್ಟಿಯಾಗುವುದನ್ನು ತಡೆಯುವ ಉದ್ದೇಶದಿಂದಲೇ ಈ ನಿರ್ಬಂಧಗಳನ್ನು ಹೇರಲಾಗಿತ್ತು ಎಂಬ ಬಲವಾದ ಆರೋಪಗಳು ವಿರೋಧ ಪಕ್ಷಗಳು ಮತ್ತು ಕಾರ್ಯಕರ್ತರಿಂದ ಕೇಳಿಬಂದವು.

ಖಾತೆಗಳನ್ನು ಅಳಿಸುವುದು ಮಾತ್ರವಲ್ಲದೆ, ಪತ್ರಕರ್ತರನ್ನು ಆರ್ಥಿಕವಾಗಿ ಮುಗಿಸುವ ಹುನ್ನಾರವೂ ಸದ್ದಿಲ್ಲದೆ ನಡೆಯುತ್ತಿದೆ. ಹಿರಿಯ ಮತ್ತು ಜನಪ್ರಿಯ ಪತ್ರಕರ್ತರು ಟಿವಿ ಮಾಧ್ಯಮ ತೊರೆದು ಯೂಟ್ಯೂಬ್‌ಗೆ ಬಂದಾಗ, ವಿಡಿಯೋಗಳ ತಲುಪುವಿಕೆಯನ್ನು ಕಡಿಮೆ ಮಾಡುವ ಶ್ಯಾಡೋ ಬ್ಯಾನ್(ಗುಪ್ತವಾಗಿ ನಿಷೇಧಿಸುವುದು) ಎಂಬ ತಂತ್ರವನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ. ವೀಕ್ಷಣೆ ಹೆಚ್ಚಿದ್ದರೂ ಯಾವುದೇ ಸ್ಪಷ್ಟ ಕಾರಣವಿಲ್ಲದೆ ಅವರ ಆದಾಯವನ್ನು ಕಡಿತಗೊಳಿಸುವ ಡೀಮಾನಿಟೈಸೇಶನ್ ಪ್ರಕ್ರಿಯೆಗಳು ನಿರಂತರವಾಗಿ ನಡೆಯುತ್ತಿವೆ. ಆನ್‌ಲೈನ್ ಗುಂಪುಗಳ ಮೂಲಕ ಸಾಮೂಹಿಕವಾಗಿ ರಿಪೋರ್ಟ್ ಮಾಡಿಸಿ ಖಾತೆಗಳನ್ನು ರದ್ದುಪಡಿಸುವ ತಂತ್ರಗಾರಿಕೆಗೆ ಸರ್ಕಾರದ ಬೆಂಬಲವಿದೆ ಎಂದು ವರದಿಗಳು ಕಳವಳ ವ್ಯಕ್ತಪಡಿಸಿವೆ.

ಕಳೆದ 12 ವರ್ಷಗಳ ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸಿದರೆ, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಸರ್ಕಾರವು ಅಘೋಷಿತ ತುರ್ತುಪರಿಸ್ಥಿತಿಯನ್ನು ಹೇರಿದೆ. ರಾಷ್ಟ್ರೀಯ ಭದ್ರತೆ ಎಂಬ ಪದವು ಕೇವಲ ವಿರೋಧಿಗಳನ್ನು ಮಟ್ಟಹಾಕುವ ಅಸ್ತ್ರವಾಗಿ ಕುಗ್ಗಿದೆ. ಯೂಟ್ಯೂಬ್ ಚಾನೆಲ್‌ಗಳ ಮೇಲಿನ ಸರಣಿ ನಿರ್ಬಂಧಗಳು ಕೇವಲ ಮಾಧ್ಯಮದ ಸ್ವತಂತ್ರ ಧ್ವನಿ ಅಡಗಿಸುವ ಯತ್ನವಲ್ಲ, ಇದು 140 ಕೋಟಿ ಭಾರತೀಯ ಜನಸಾಮಾನ್ಯರಿಗೆ ಸತ್ಯ ತಿಳಿಯದಂತೆ ಮಾಡುವ ಸರ್ವಾಧಿಕಾರಿ ನಡೆಯಾಗಿದೆ. ದಮನಿತರ ದನಿಯಾಗಿರುವ ಇಂತಹ ಪರ್ಯಾಯ ಡಿಜಿಟಲ್ ವೇದಿಕೆಗಳ ಮೇಲಿನ ನಿರಂತರ ಪ್ರಹಾರವು ಭಾರತೀಯ ಪ್ರಜಾಪ್ರಭುತ್ವದ ಸುದೀರ್ಘ ಇತಿಹಾಸದಲ್ಲಿ ಕರಾಳ ಅಧ್ಯಾಯವಾಗಿ ಉಳಿಯಲಿದೆ. ಈ ಎಲ್ಲಾ ವಾಸ್ತವಿಕ ಅಂಶಗಳು ಆಡಳಿತ ವ್ಯವಸ್ಥೆಯು ಪ್ರಜಾಪ್ರಭುತ್ವದ 4 ನೇ ಅಂಗವನ್ನು ದಮನಿಸುವ ಮೂಲಕ ಮುಕ್ತ ಸಮಾಜದ ನಿರ್ಮಾಣಕ್ಕೆ ಬಹು ದೊಡ್ಡ ಅಡ್ಡಿಯುಂಟುಮಾಡಿದೆ ಎಂಬ ಆತಂಕವನ್ನು ಸೃಷ್ಟಿಸಿವೆ.

ಇಲ್ಲಿ ಹೆಣ್ಣು ಮಕ್ಕಳನ್ನ ದಷ್ಟಪುಷ್ಟವಾಗಿ ಬೆಳೆಸುವುದು ಭದ್ರ ಭವಿಷ್ಯಕ್ಕಾಗಿ ಅಲ್ಲ, ಸಂಪಾದನೆಗಾಗಿ!

ಭಾರತದಲ್ಲಿ ಹೆಣ್ಣು ಮಗು ಜನಿಸಿದರೆ ಮುಖ ಸಪ್ಪಗಾಗುವ ಕುಟುಂಬಗಳೂ ಇನ್ನೂ ಸಾಕಷ್ಟಿವೆ. ಆದರೆ ಮಧ್ಯಪ್ರದೇಶದ ಬಂಛಾಡ ಸಮುದಾಯದ ಕುಟುಂಬಗಳಲ್ಲಿ ಹೆಣ್ಣು ಮಗು ಜನಿಸಿದರೆ ಹಬ್ಬದ ವಾತಾವರಣ. ಗಂಡು ಮಕ್ಕಳಿಗಿಂತ ಹೆಚ್ಚು ಆರೈಕೆ, ಒಳ್ಳೆ ಆಹಾರ, ಒಳ್ಳೆಯ ಬಟ್ಟೆ- ಎಲ್ಲವೂ ಆಕೆಗೆ. ಆದರೆ, ಕೆಲವೇ ವರ್ಷಗಳಲ್ಲಿ ಆ ಸಂಭ್ರಮ ಪಡುವುದರ ಅರ್ಥವೇ ಬದಲಾಗಿಹೋಗುತ್ತದೆ. ಆಕೆಯನ್ನು ದಷ್ಟಪುಷ್ಟವಾಗಿ ಬೆಳೆಸುವುದು ಮುಂದಿನ ಆಕೆಯ ಭದ್ರ ಭವಿಷ್ಯಕ್ಕಾಗಿ, ಆರೋಗ್ಯಕ್ಕಾಗಿ ಅಲ್ಲ; ಸಂಪಾದನೆಗಾಗಿ! ಆ ಹೆಣ್ಣು ಮಗು ಹರೆಯಕ್ಕೆ ಕಾಲಿಟ್ಟ ಕೂಡಲೇ, ಕುಟುಂಬದ ಆರ್ಥಿಕ ಹೊರೆ ಹೊರಲು ವೇಶ್ಯಾವಾಟಿಕೆಗೆ ತಳ್ಳಲಾಗುತ್ತದೆ. ಒಂದೆಡೆ ಮಗಳ ಜನನವನ್ನು ಸಂಭ್ರಮಿಸುವ ಕುಟುಂಬ, ಮತ್ತೊಂದೆಡೆ ಅದೇ ಮಗಳ ಬಾಲ್ಯ ಮತ್ತು ಭವಿಷ್ಯವನ್ನು ಕಸಿದುಕೊಳ್ಳುವ ವ್ಯವಸ್ಥೆ ಜೀವಂತವಾಗಿದೆ. ಬಂಛಾಡ ಸಮುದಾಯದ ಈ ವಿರೋಧಾಭಾಸದ ಬದುಕಿನ ಹಿಂದೆ ವಸಾಹತುಶಾಹಿ ಇತಿಹಾಸ, ಬಡತನ ಮತ್ತು ಸಾಮಾಜಿಕ ಬಹಿಷ್ಕಾರದ ಸುದೀರ್ಘ ಕಥೆಯೇ ಇದೆ.

ಬಂಛಾಡ ಸಮುದಾಯದ ಕೆಲವು ಭಾಗಗಳಲ್ಲಿ ಇಂದಿಗೂ ಮುಂದುವರಿದಿರುವ ಈ ಪದ್ಧತಿಯನ್ನು ಅರ್ಥಮಾಡಿಕೊಳ್ಳಲು ''ವೇಶ್ಯಾವಾಟಿಕೆ'' ಎಂಬ ಪದ ಸಾಕಾಗುವುದಿಲ್ಲ. ಅದರ ಹಿಂದೆ ತಲೆಮಾರುಗಳಿಂದ ಹೆಪ್ಪುಗಟ್ಟಿರುವ ಸಾಮಾಜಿಕ ಮತ್ತು ಅದಕ್ಕೆ ಬೆಸೆದುಕೊಂಡಿರುವ ಆರ್ಥಿಕ ವ್ಯವಸ್ಥೆಯಿದೆ. ಈ ವ್ಯವಸ್ಥೆಯೊಂದಿದೆ. ಮನೆಯ ಹಿರಿಯ ಮಗಳನ್ನು ಕುಟುಂಬದ ಸಂಪತ್ತಿನಂತೆ ಪರಿಗಣಿಸಲಾಗುತ್ತದೆ. ಬಾಲ್ಯದಲ್ಲೇ ಆಕೆಗೆ ಉತ್ತಮ ಆಹಾರ, ಒಳ್ಳೆ ಬಟ್ಟೆ, ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವುದು ಆಕೆಯ ಮೇಲಿನ ಪ್ರೀತಿಯಿಂದಲ್ಲ; ಮುಂದೊಂದು ದಿನ ಕುಟುಂಬದ ಜೀವನೋಪಾಯದ ಹೊಣೆಯನ್ನು ಹೊರುವ ವ್ಯಕ್ತಿಯಾಗಿ ಆಕೆಯನ್ನು ಸಿದ್ಧಗೊಳಿಸುವ ಪ್ರಕ್ರಿಯೆಯ ಭಾಗವಾಗಿರುತ್ತದೆ.

ಸಮಾಜಶಾಸ್ತ್ರಜ್ಞರ ಪ್ರಕಾರ, ಬಂಛಾಡ ಸಮುದಾಯದ ಕೆಲವು ಕುಟುಂಬಗಳಲ್ಲಿ ಹಿರಿಯ ಮಗಳನ್ನು ಮದುವೆ ಮಾಡುವುದು ಅಪರೂಪದಲ್ಲೇ ಅಪರೂಪ. ಮದುವೆಯಾದರೆ ಆಕೆ ಬೇರೆ ಮನೆಗೆ ಹೋಗುತ್ತಾಳೆ. ಆಗ ಕುಟುಂಬದ ಆದಾಯದ ಮೂಲವೇ ಇರುವುದಿಲ್ಲ ಎಂಬ ಮನೋಭಾವ ಕಾಲಗಳಿಂದ ಬೆಳೆದು ಬಂದಿದೆ. ಹೀಗಾಗಿ ಮದುವೆಯ ಬದಲಿಗೆ ಆಕೆಯನ್ನು ವೇಶ್ಯಾವಾಟಿಕೆಗೆ ತಳ್ಳಲಾಗುತ್ತದೆ. ಆಕೆಯ ಗಳಿಕೆಯಿಂದ ತಮ್ಮಂದಿರ ಶಿಕ್ಷಣ, ಅವರ ಮದುವೆ, ಮನೆ ನಿರ್ಮಾಣ, ಕುಟುಂಬದ ಸಾಲ, ದೈನಂದಿನ ಖರ್ಚು.. ಎಲ್ಲವನ್ನೂ ನಿರ್ವಹಿಸಲಾಗುತ್ತದೆ. ವಿಚಿತ್ರವೆಂದರೆ, ಕುಟುಂಬದ ಗಂಡು ಮಕ್ಕಳು ಮದುವೆಯಾಗಿ ಪ್ರತ್ಯೇಕ ಜೀವನ ಆರಂಭಿಸಿದರೂ, ಮನೆಯ ಆರ್ಥಿಕ ಹೊರೆ ಹೊರುವ ಜವಾಬ್ದಾರಿ ಮಾತ್ರ ಹೆಣ್ಣುಮಗಳ ಹೆಗಲ ಮೇಲೆಯೇ ಬಿದ್ದುಕೊಂಡಿರುತ್ತದೆ.

ಮಧ್ಯಪ್ರದೇಶ ಮತ್ತು ರಾಜಸ್ಥಾನದ ಗಡಿಭಾಗಗಳಲ್ಲಿ ಹೆಚ್ಚಾಗಿ ವಾಸಿಸುವ ಬಂಛಾಡ ಸಮುದಾಯವು ಹಿಂದೆ ಅರೆ ಅಲೆಮಾರಿ ಜೀವನ ನಡೆಸುತ್ತಿದ್ದ ಸಮುದಾಯಗಳಲ್ಲಿ ಒಂದಾಗಿತ್ತು. ಕೆಲವು ಐತಿಹಾಸಿಕ ಉಲ್ಲೇಖಗಳ ಪ್ರಕಾರ, ಬ್ರಿಟಿಷರ ಆಳ್ವಿಕೆಗೂ ಮುನ್ನ ಈ ಸಮುದಾಯದ ಜನರು ಜಾನುವಾರು ವ್ಯಾಪಾರ, ಸಣ್ಣಪುಟ್ಟ ವ್ಯಾಪಾರ ಮತ್ತು ವಿವಿಧ ರೀತಿಯ ಸಂಚಾರ ಆಧಾರಿತ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದರು. ಬ್ರಿಟಿಷ್ ಆಡಳಿತ 1871ರಲ್ಲಿ ಜಾರಿಗೆ ತಂದ ಕ್ರಿಮಿನಲ್ ಟ್ರೈಬ್ಸ್ ಆ್ಯಕ್ಟ್ ತಿಳಿದಿರಬಹುದು. ಅಲ್ಲಿಂದ ಇವರ ಜೀವನ ದಿಕ್ಕಾಪಾಲಾಯಿತು. ಅಪರಾಧದ ಯಾವುದೇ ಸಾಕ್ಷ್ಯವಿಲ್ಲದಿದ್ದರೂ, ಸಮುದಾಯದ ಗುರುತಿನ ಆಧಾರದ ಮೇಲೆ ಅವರನ್ನು ''ಜನ್ಮತಃ ಅಪರಾಧಿಗಳು'' ಎಂದು ಪರಿಗಣಿಸಲಾಯಿತು. ವ್ಯಕ್ತಿಯೊಬ್ಬ ಅಪರಾಧ ಮಾಡಿದ್ದಾನೆಯೇ ಎಂಬುದಕ್ಕಿಂತ, ಆತ ಯಾವ ಸಮುದಾಯದಲ್ಲಿ ಹುಟ್ಟಿದ್ದಾನೆ ಎಂಬುದೇ ಅವನ ಗುರುತಾಯಿತು. 1952ರಲ್ಲಿ ಸ್ವತಂತ್ರ ಭಾರತ ಈ ಕಾನೂನನ್ನು ರದ್ದುಪಡಿಸಿ, ಈ ಸಮುದಾಯಗಳನ್ನು ಡಿ-ನೋಟಿಫೈಡ್ ಟ್ರೈಬ್ಸ್ ಎಂದು ಘೋಷಿಸಿತು. ಆದರೆ ಕಾನೂನು ಬದಲಾದರೂ ವರ್ಷಗಳಿಂದ ಬಂದಿದ್ದ ಸಾಮಾಜಿಕ ಕಳಂಕ ಸುಲಭವಾಗಿ ಕಳೆಯಲಿಲ್ಲ. ನಿರುದ್ಯೋಗ, ಮನೆ ಬಾಡಿಗೆಗೆ ಬೇಕೆಂದರೆ ನಿರಾಕರಣೆ, ಮಕ್ಕಳನ್ನು ಶಾಲೆಗೆ ಸೇರಿಸಲು ಹೋದರೂ ತಾರತಮ್ಯ.. ಇಂತಹ ಅನುಭವಗಳನ್ನು ಅನೇಕ ಕುಟುಂಬಗಳು ಎದುರಿಸಬೇಕಾಯಿತು. ತಲೆಮಾರುಗಳಿಂದ ಅವಕಾಶಗಳಿಂದ ವಂಚಿತವಾದ ಸಮುದಾಯವೊಂದು ನಿಧಾನವಾಗಿ ಬಡತನದ ದುಷ್ಟಚಕ್ರದಲ್ಲಿ ಸಿಲುಕಿತು. ಈ ಸಮುದಾಯದ ಮೇಲೆ ಅಂಟಿಸಿದ ''ಕ್ರಿಮಿನಲ್ ಟ್ರೈಬ್'' ಎಂಬ ಹಣೆಪಟ್ಟಿಯ ಪರಿಣಾಮ, ಕಾನೂನು ರದ್ದಾದ ದಶಕಗಳ ನಂತರವೂ ಅವರ ಬದುಕಿನ ಮೇಲೆ ಹೇಗೆ ಮುಂದುವರಿಯಬಹುದು ಎಂಬುದಕ್ಕೆ ಇತಿಹಾಸವೇ ಸಾಕ್ಷಿ.

ಈ ಅಮಾನವೀಯ ವ್ಯವಸ್ಥೆಗೆ ಸಮುದಾಯದೊಳಗಿನ ಕೆಲವು ಆಚರಣೆಗಳೂ ಕಾರಣವಾಗಿವೆ. ಅವುಗಳಲ್ಲಿ ಮುಖ್ಯವಾದುದು ನಥ್ ಉತರ್ನಾ ಎಂಬ ಪದ್ಧತಿ. ಉತ್ತರ ಭಾರತದ ಕೆಲವು ಭಾಗಗಳಲ್ಲಿ ಮೂಗಿನ ಓಲೆ (ನಥ್) ತೆಗೆಯುವ ಸಂಪ್ರದಾಯವನ್ನು ಮದುವೆಯ ಸಂಕೇತವಾಗಿ ಪರಿಗಣಿಸಿದರೆ, ಬಂಛಾಡ ಸಮುದಾಯದ ಕೆಲವು ಪ್ರದೇಶಗಳಲ್ಲಿ ಇದೇ ಪದಕ್ಕೆ ಬೇರೆಯದೇ ಅರ್ಥ ಸಿಕ್ಕಿದೆ. ಯುವತಿಯೊಬ್ಬಳನ್ನು ಮೊದಲ ಬಾರಿಗೆ ಲೈಂಗಿಕ ಶೋಷಣೆಯ ವಲಯಕ್ಕೆ ಪ್ರವೇಶಿಸುವ ಸಂದರ್ಭವನ್ನು ನಥ್ ಉತರ್ನಾ ಎಂದು ಕರೆಯಲಾಗುತ್ತದೆ ಎಂದು ಹಲವು ಅಧ್ಯಯನಗಳು ಉಲ್ಲೇಖಿಸಿವೆ. ಆ ದಿನದಿಂದ ಆಕೆಯ ಬಾಲ್ಯ ಕೊನೆಗೊಳ್ಳುತ್ತದೆ; ಕುಟುಂಬದ ಆದಾಯದ ಹೊಣೆಗಾರಿಕೆ ಆರಂಭವಾಗುತ್ತದೆ.



ಈ ಪದ್ಧತಿಯಲ್ಲಿ ಅತ್ಯಂತ ನೋವಿನ ಸಂಗತಿ ಏನೆಂದರೆ, ಅನೇಕ ಸಂದರ್ಭಗಳಲ್ಲಿ ಈ ನಿರ್ಧಾರವನ್ನು ಯುವತಿಯೇ ತೆಗೆದುಕೊಳ್ಳುವುದಿಲ್ಲ. ಕುಟುಂಬ, ಸಂಬಂಧಿಕರು ಮತ್ತು ಸಮುದಾಯದ ಒತ್ತಡವೇ ಆಕೆಯ ಬದುಕಿನ ದಿಕ್ಕನ್ನು ನಿರ್ಧರಿಸುತ್ತದೆ. ಬಾಲ್ಯದಿಂದಲೇ ನೀನೇ ಮನೆಯ ಆಧಾರ, ನೀನು ಸಂಪಾದಿಸಿದರೆ ಮಾತ್ರವೇ ಮನೆ ನಡೆಯುತ್ತದೆ ಎಂಬ ಮನೋಭಾವವನ್ನು ಆಕೆಯಲ್ಲಿ ಬೆಳೆಸಲಾಗುತ್ತದೆ. ಪರಿಣಾಮ, ಅನೇಕ ಯುವತಿಯರು ಇದನ್ನು ತಮ್ಮ ಕರ್ತವ್ಯವೆಂದು ಒಪ್ಪಿಕೊಳ್ಳುವ ಪರಿಸ್ಥಿತಿಯೂ ನಿರ್ಮಾಣವಾಗುತ್ತದೆ. ಇದರಿಂದ ಮತ್ತೊಂದು ದುಷ್ಟಚಕ್ರವೂ ನಿರ್ಮಾಣವಾಗುತ್ತದೆ. ಶಿಕ್ಷಣ ಅರ್ಧಕ್ಕೆ ನಿಲ್ಲುತ್ತದೆ. ಸ್ವಂತ ವೃತ್ತಿ ಕಟ್ಟಿಕೊಳ್ಳುವ ಅವಕಾಶ ಕಳೆದುಹೋಗುತ್ತದೆ. ಸ್ವತಂತ್ರ ಜೀವನದ ಕನಸುಗಳು ಮುರಿದು ಬೀಳುತ್ತವೆ. ಸಂಪಾದನೆ ಇದ್ದರೂ ಅದರ ಮೇಲೆ ಮಹಿಳೆಗೆ ಸಂಪೂರ್ಣ ಹಕ್ಕು ಇರುವುದಿಲ್ಲ. ಹಣದ ಬಳಕೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದು ಹೆಚ್ಚಾಗಿ ಕುಟುಂಬದ ಹಿರಿಯರೇ. ದುಡಿಮೆಯೂ ಅವಳದು, ತ್ಯಾಗವೂ ಅವಳದು; ಆದರೆ ಬದುಕಿನ ಮೇಲಿನ ಹಕ್ಕು ಮಾತ್ರ ಅವಳದ್ದಲ್ಲ.

ಕೆಲವು ವರದಿಗಳ ಪ್ರಕಾರ, ಸಮುದಾಯದ ಕೆಲವು ಭಾಗಗಳಲ್ಲಿ ಮದುವೆಗೆ ಸಂಬಂಧಿಸಿದ ಕೆಲವು ಸಂಪ್ರದಾಯಗಳೂ ಮಹಿಳೆಯರ ಮೇಲೆಯೇ ಹೆಚ್ಚುವರಿ ಒತ್ತಡವನ್ನು ಹೇರುತ್ತವೆ. ವರನ ಕುಟುಂಬವು ವಧುವಿನ ಕುಟುಂಬಕ್ಕೆ ₹2 ಲಕ್ಷದಿಂದ ₹2.5 ಲಕ್ಷದವರೆಗೆ ಹಣ ನೀಡುವ ಪದ್ಧತಿ ಕೆಲವು ಪ್ರದೇಶಗಳಲ್ಲಿ ಇದೆ ಎಂದು ಅಧ್ಯಯನಗಳು ಉಲ್ಲೇಖಿಸಿವೆ. ಈ ಹಣವನ್ನು ಸಾಮಾನ್ಯವಾಗಿ ವರನ ಸಹೋದರಿ ತನ್ನ ಗಳಿಕೆಯಿಂದ ಒದಗಿಸುತ್ತಾಳೆ. ಇಂತಹ ನಿಯಮಗಳನ್ನು ಸಮುದಾಯದ ಜಾತಿ ಪಂಚಾಯಿತಿಯೇ ನಿರ್ಧರಿಸುತ್ತದೆ. ಒಂದು ವೇಳೆ ವಿವಾಹ ವಿಚ್ಛೇದನ ಬಯಸಿದರೆ, ವಧುವಿನ ಕುಟುಂಬವು ಪಡೆದಿದ್ದ ಮೊತ್ತದ ಎರಡು ಪಟ್ಟು ಹಣವನ್ನು ಹಿಂದಿರುಗಿಸಬೇಕಾಗುತ್ತದೆ ಎನ್ನುವ ಪದ್ಧತಿಯೂ ಕೆಲವು ಕಡೆ ಇದೆ. ಹೀಗಾಗಿ ಮದುವೆಯಾಗಲಿ, ಮದುವೆ ಮುರಿಯುವುದಾಗಲಿ ಎರಡೂ ಸಂದರ್ಭಗಳಲ್ಲಿ ಮಹಿಳೆಯರೇ ಹೆಚ್ಚಿನ ಹೊರೆ ಮತ್ತು ನಷ್ಟವನ್ನು ಅನುಭವಿಸುತ್ತಾರೆ.

ಈ ಪದ್ಧತಿಗಳನ್ನು ಕಾನೂನಿನ ಮೂಲಕ ಪ್ರಶ್ನಿಸುವುದೂ ಸುಲಭವಲ್ಲ. ಪೊಲೀಸ್ ಠಾಣೆ ಅಥವಾ ನ್ಯಾಯಾಲಯದ ಮೆಟ್ಟಿಲೇರುವ ಅವಕಾಶ ಇದ್ದರೂ, ಸಮುದಾಯದೊಳಗಿನ ಜಾತಿ ಪಂಚಾಯಿತಿಯ ಪ್ರಭಾವ ಇನ್ನೂ ಬಲವಾಗಿರುವುದರಿಂದ ಅನೇಕ ಕುಟುಂಬಗಳು ಅದರ ವಿರುದ್ಧ ಧ್ವನಿ ಎತ್ತಲು ಹಿಂಜರಿಯುತ್ತವೆ. ''ಕೊನೆಗೆ ನಾವು ಇದೇ ಸಮುದಾಯದಲ್ಲಿ ಬದುಕಬೇಕಾಗುತ್ತದೆ. ಜಾತಿ ಪಂಚಾಯಿತಿ ನಿರ್ಧಾರಕ್ಕೆ ತಲೆಬಾಗಬೇಕಾಗುತ್ತದೆ'' ಎಂದು ಸಮುದಾಯದ ಮಹಿಳೆಯೊಬ್ಬರು ಹೇಳಿರುವುದಾಗಿ ವರದಿಯಾಗಿದೆ.

ಈ ಪದ್ಧತಿಗಳನ್ನು ಕಾನೂನಿನ ಮೂಲಕ ಪ್ರಶ್ನಿಸುವುದೂ ಸುಲಭವಲ್ಲ. ಪೊಲೀಸ್ ಠಾಣೆ ಅಥವಾ ನ್ಯಾಯಾಲಯದ ಮೆಟ್ಟಿಲೇರುವ ಅವಕಾಶ ಇದ್ದರೂ, ಸಮುದಾಯದೊಳಗಿನ ಜಾತಿ ಪಂಚಾಯಿತಿಯ ಪ್ರಭಾವ ಇನ್ನೂ ಬಲವಾಗಿರುವುದರಿಂದ ಅನೇಕ ಕುಟುಂಬಗಳು ಅದರ ವಿರುದ್ಧ ಧ್ವನಿ ಎತ್ತಲು ಹಿಂಜರಿಯುತ್ತವೆ. ''ಕೊನೆಗೆ ನಾವು ಇದೇ ಸಮುದಾಯದಲ್ಲಿ ಬದುಕಬೇಕಾಗುತ್ತದೆ. ಜಾತಿ ಪಂಚಾಯಿತಿ ನಿರ್ಧಾರಕ್ಕೆ ತಲೆಬಾಗಬೇಕಾಗುತ್ತದೆ'' ಎಂದು ಸಮುದಾಯದ ಮಹಿಳೆಯೊಬ್ಬರು ಹೇಳಿರುವುದಾಗಿ ವರದಿಯಾಗಿದೆ.

ಈ ವೃತ್ತಿಯಲ್ಲಿ ಮಹಿಳೆಯರ ಆದಾಯದ ಅವಧಿಯೂ ಬಹಳ ಸೀಮಿತ. ಸಾಮಾನ್ಯವಾಗಿ 2627 ವರ್ಷಗಳ ನಂತರ ಅವರ ಗಳಿಕೆಯ ಅವಕಾಶಗಳು ಕುಂಠಿತವಾಗುತ್ತವೆ ಎಂದು ಸಮುದಾಯದೊಂದಿಗೆ ಕೆಲಸ ಮಾಡುತ್ತಿರುವ ಕಾರ್ಯಕರ್ತರೇ ಹೇಳಿರುವ ವರದಿಗಳು ಸಿಗುತ್ತವೆ. ಆ ವಯಸ್ಸಿನ ಬಳಿಕ ಅವರಿಗೆ ಪರ್ಯಾಯ ಉದ್ಯೋಗ ಸಿಗುವುದು ಸುಲಭವಲ್ಲ. ಔಪಚಾರಿಕ ಉದ್ಯೋಗಕ್ಕೆ ಅಗತ್ಯವಾದ ಶಿಕ್ಷಣ ಮತ್ತು ಕೌಶಲ್ಯದ ಕೊರತೆ ಒಂದು ಕಡೆ ಇದ್ದರೆ, ಮತ್ತೊಂದೆಡೆ ವೇಶ್ಯಾವಾಟಿಕೆಯ ಕಳಂಕ ಮತ್ತು ಜಾತಿ ಆಧಾರಿತ ತಾರತಮ್ಯ ಅವರನ್ನು ಬೇರೆ ಉದ್ಯೋಗಗಳಿಂದಲೂ ದೂರವಿಡುತ್ತದೆ. ಕೆಲವರು ಮನೆಗೆಲಸದಂತಹ ಅನೌಪಚಾರಿಕ ಕೆಲಸ ಪಡೆದರೂ, ''ವೇಶ್ಯಾವಾಟಿಕೆ ನಡೆಸುವ ಸಮುದಾಯದವರು'' ಎಂಬ ಹಣೆಪಟ್ಟಿಯಿಂದ ಅವಮಾನ, ತಾರತಮ್ಯ ಮತ್ತು ಮಾನಸಿಕ ಕಿರುಕುಳ ಅನುಭವಿಸಲೇಬೇಕಾಗುತ್ತದೆ.


ಇಂತಹ ಪರಿಸ್ಥಿತಿಯಲ್ಲಿ ಬಂಛಾಡ ಸಮುದಾಯದ ಅನೇಕ ಮಹಿಳೆಯರು ಶಿಕ್ಷಣವನ್ನೇ ತಮ್ಮ ಬದುಕು ಬದಲಿಸುವ ಏಕೈಕ ಮಾರ್ಗವೆಂದು ನೋಡುತ್ತಿದ್ದಾರೆ. ಓದಿದರೆ ಮಾತ್ರ ಸಮಾಜ ಗೌರವಿಸುವ ಉದ್ಯೋಗ ಸಿಗುತ್ತದೆ, ತಮ್ಮ ಮಕ್ಕಳಿಗೆ ವಿಭಿನ್ನ ಭವಿಷ್ಯ ಕಟ್ಟಿಕೊಡಬಹುದು ಎಂಬ ನಂಬಿಕೆ ಅವರಲ್ಲಿದೆ. ಆದರೆ ಈ ಕನಸನ್ನು ನನಸಾಗಿಸುವುದು ಅಷ್ಟು ಸುಲಭವಲ್ಲ. ಶತಮಾನಗಳಿಂದ ಕುಟುಂಬದ ಪ್ರಮುಖ ಆದಾಯದ ಮೂಲವೇ ಯುವತಿಯರಾಗಿರುವುದರಿಂದ, ಅವರನ್ನು ಶಾಲೆ-ಕಾಲೇಜಿಗೆ ಕಳುಹಿಸುವುದಕ್ಕೆ ಕುಟುಂಬ ಮತ್ತು ಸಮುದಾಯದೊಳಗೇ ವಿರೋಧ ಎದುರಾಗುತ್ತದೆ.


ಶಿಕ್ಷಣ ಪಡೆಯಲು ಬಯಸುವ ಮಕ್ಕಳಿಗೆ ಆಡಳಿತಾತ್ಮಕ ಅಡೆತಡೆಗಳೂ ಎದುರಾಗುತ್ತವೆ. ಸರ್ಕಾರ ಹಲವು ಬಾರಿ ಶಾಲಾ ಪ್ರವೇಶದ ವೇಳೆ ತಂದೆಯ ಹೆಸರನ್ನು ಕಡ್ಡಾಯಗೊಳಿಸಬಾರದು ಎಂದು ಸೂಚನೆ ನೀಡಿದ್ದರೂ, ಕೆಲವು ಶಾಲೆಗಳು ಇನ್ನೂ ತಂದೆಯ ಹೆಸರು ಮತ್ತು ದಾಖಲೆಗಳನ್ನು ಕಡ್ಡಾಯವಾಗಿ ಕೇಳುತ್ತಿವೆ ಎಂಬ ಆರೋಪಗಳಿವೆ. ಬಂಛಾಡ ಸಮುದಾಯದ ಅನೇಕ ಮಕ್ಕಳಿಗೆ ತಮ್ಮ ತಂದೆಯ ಗುರುತು ತಿಳಿದಿರುವುದಿಲ್ಲ ಅಥವಾ ಅಗತ್ಯ ದಾಖಲೆಗಳಿರುವುದಿಲ್ಲ. ಪರಿಣಾಮ, ಶಾಲಾ ಪ್ರವೇಶವೇ ಕಷ್ಟವಾಗುತ್ತದೆ. ಶಿಕ್ಷಣವಿಲ್ಲದ ಕಾರಣ ಪರ್ಯಾಯ ಉದ್ಯೋಗ ಸಿಗುವುದಿಲ್ಲ; ಉದ್ಯೋಗವಿಲ್ಲದ ಕಾರಣ ಮತ್ತೆ ಹಳೆ ಅಮಾನವೀಯ ಬದುಕು. ಈ ಪರಿಸ್ಥಿತಿಯೇ ಬಂಛಾಡ ಸಮುದಾಯದ ಅನೇಕ ಕುಟುಂಬಗಳನ್ನು ಇಂದಿಗೂ ಶೋಷಣೆಯ ವಲಯದಿಂದ ಹೊರಬರಲು ಬಿಡುತ್ತಿಲ್ಲ.

ಆದರೆ ಈ ವೈಫಲ್ಯವನ್ನ ಇಡೀ ಬಂಛಾಡ ಸಮುದಾಯಕ್ಕೆ ಅನ್ವಯಿಸುವುದು ನ್ಯಾಯಸಮ್ಮತವಲ್ಲ. ಕಳೆದ ಎರಡು ದಶಕಗಳಲ್ಲಿ ಈ ಸಮುದಾಯದೊಳಗೇ ಬದಲಾವಣೆಯ ಗಾಳಿ ಬೀಸತೊಡಗಿದೆ. ಶಿಕ್ಷಣದ ಮಹತ್ವ ಅರಿತ ಪೋಷಕರು ತಮ್ಮ ಹೆಣ್ಣುಮಕ್ಕಳನ್ನು ಶಾಲೆ-ಕಾಲೇಜಿಗೆ ಕಳುಹಿಸುತ್ತಿದ್ದಾರೆ. ಅನೇಕ ಯುವತಿಯರು ನರ್ಸಿಂಗ್, ಶಿಕ್ಷಣ, ಸರ್ಕಾರಿ ಉದ್ಯೋಗ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಬದುಕು ಕಟ್ಟಿಕೊಳ್ಳುತ್ತಿದ್ದಾರೆ. ತಮ್ಮ ಹೆಣ್ಣುಮಕ್ಕಳನ್ನು ಈ ದುಷ್ಟಚಕ್ರದಿಂದ ಹೊರಗೆ ತರಲು ಹೋರಾಡುತ್ತಿರುವ ತಾಯಂದಿರ ಸಂಖ್ಯೆಯೂ ಹೆಚ್ಚುತ್ತಿದೆ. ಆದಾಗ್ಯೂ, ಕೆಲವು ಪ್ರದೇಶಗಳಲ್ಲಿ ಬಡತನ, ಪರ್ಯಾಯ ಉದ್ಯೋಗದ ಕೊರತೆ ಮತ್ತು ವರ್ಷಗಳಿಂದ ಬೇರೂರಿರುವ ಸಾಮಾಜಿಕ ಮನೋಭಾವ ಈ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಅಡ್ಡಿಯಾಗುತ್ತಿದೆ.

ಶತಮಾನಗಳ ಕಾಲ ಒಂದು ಸಮುದಾಯಕ್ಕೆ ಶಿಕ್ಷಣ, ಉದ್ಯೋಗ ಮತ್ತು ಗೌರವಯುತ ಬದುಕಿನ ಅವಕಾಶಗಳನ್ನು ನಿರಾಕರಿಸಿದ ಸಮಾಜ, ನಂತರ ಅವರ ಹಿಂದುಳಿದ ಸ್ಥಿತಿಯನ್ನು ಹೇಗೆ ಅಳೆಯಬೇಕು ಎಂಬ ಪ್ರಶ್ನೆಯನ್ನ ಕೇಳಿಕೊಳ್ಳುವ ಸಮಯವಿದು. ಒಂದು ಹೆಣ್ಣು ಮಗು ಹುಟ್ಟಿದಾಗ ಆಕೆಯ ಭವಿಷ್ಯದ ಬಗ್ಗೆ ಕನಸು ಕಾಣಬೇಕಾದ ಜಾಗದಲ್ಲಿ, ಆಕೆಯಿಂದ ಕುಟುಂಬ ಎಷ್ಟು ಸಂಪಾದಿಸಬಹುದು ಎಂಬ ಲೆಕ್ಕಾಚಾರ ನಡೆಯುತ್ತಿದೆ ಎಂದರೆ, ಅದು ಆ ಸಮುದಾಯದ ದುರಂತವಲ್ಲದೆ ಮತ್ತೇನಲ್ಲ. ಬಂಛಾಡ ಸಮುದಾಯದ ನಿಜವಾದ ಬದಲಾವಣೆ ಸಹಾನುಭೂತಿಯಿಂದ ಸಾಧ್ಯವಾಗುವುದಿಲ್ಲ. ಶಿಕ್ಷಣ, ಸಮಾನ ಅವಕಾಶ ಮತ್ತು ಗೌರವಯುತ ಬದುಕಿನ ಹಕ್ಕು ದೊರೆತಾಗ ಮಾತ್ರ ತಲೆಮಾರುಗಳಿಂದ ಮುಂದುವರಿದಿರುವ ಈ ದುಷ್ಟಚಕ್ರ ಮುರಿಯಲು ಸಾಧ್ಯ.

ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿಗೆ ಕೈತಪ್ಪಿದ ಸಚಿವ ಸ್ಥಾನ : ಪೆಟ್ರೋಲ್ ಸುರಿದುಕೊಂಡು ಬೆಂಬಲಿಗನಿಂದ ಆತ್ಮಹತ್ಯೆಗೆ ಯತ್ನ





ಸಿಂಧನೂರು: ರಾಜ್ಯ ಸಚಿವ ಸಂಪುಟದ ಎರಡನೇ ಹಂತದ ವಿಸ್ತರಣೆಯಲ್ಲಿ ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ದೊರೆಯದ ಹಿನ್ನೆಲೆಯಲ್ಲಿ ಅವರ ಬೆಂಬಲಿಗರು ಪ್ರತಿಭಟನೆ ನಡೆಸಿ ಹೈಕಮಾಂಡ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಬೆಂಬಲಿಗನೊಬ್ಬ ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ನಡೆಯಿತು.

ನಗರದ ಗಾಂಧಿ ವೃತ್ತದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ದಿಢೀರ್ ಪ್ರತಿಭಟನೆ ನಡೆಸಿ ಸಚಿವ ಸ್ಥಾನ ನೀಡದಿರುವುದನ್ನು ಖಂಡಿಸಿದರು. ಇದೇ ಸಂದರ್ಭದಲ್ಲಿ ಹಂಪನಗೌಡ ಬಾದರ್ಲಿ ಅವರ ಬೆಂಬಲಿಗ ಹಾಗೂ ಜಿಲ್ಲಾ ಕೆಡಿಪಿ ಸದಸ್ಯ ಶಫಿವುಲ್ಲಾ ಖಾನ್ ಅವರು ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದರು. ಸ್ಥಳದಲ್ಲಿದ್ದ ಪೊಲೀಸರು ತಕ್ಷಣವೇ ಪೆಟ್ರೋಲ್ ಬಾಟಲಿಯನ್ನು ಕಸಿದುಕೊಂಡು ಅವರನ್ನು ಸಮಾಧಾನಪಡಿಸಿದ್ದಾರೆ ಎಂದು ತಿಳಿದು ಬಂದಿದೆ.

ಸಚಿವ ಸ್ಥಾನಕ್ಕಾಗಿ ಕಳೆದ ಒಂದು ವಾರದಿಂದ ಸಾವಿರಕ್ಕೂ ಹೆಚ್ಚು ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಬೆಂಗಳೂರಿನಲ್ಲಿ ಬೀಡುಬಿಟ್ಟಿದ್ದರು. ಅಂತಿಮ ಪಟ್ಟಿಯಲ್ಲೂ ಹಂಪನಗೌಡ ಬಾದರ್ಲಿ ಅವರ ಹೆಸರು ಇಲ್ಲದಿರುವುದು ಬೆಂಬಲಿಗರಲ್ಲಿ ತೀವ್ರ ನಿರಾಸೆ ಮೂಡಿಸಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಶಾಸಕರ ಭವನದ ಎದುರು ಕೂಡ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಕಣ್ಣೀರು ಹಾಕಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುಡಾ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸುದ್ದಿ :

ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ಕೈತಪ್ಪಿದ ಹಿನ್ನೆಲೆಯಲ್ಲಿ ಅವರ ಸಹೋದರನ ಪುತ್ರ ಹಾಗೂ ಸುಡಾ ಅಧ್ಯಕ್ಷ ಬಾಬುಗೌಡ ಬಾದರ್ಲಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂಬ ಪತ್ರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ ಯಾವುದೇ ಕಾರಣಕ್ಕೂ ರಾಜೀನಾಮೆ ನೀಡಬಾರದು ಎಂದು ಶಾಸಕ ಹಂಪನಗೌಡ ಬಾದರ್ಲಿ ಅವರು ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR